Therefore, it is to be brought to your knowledge that, M/s Yashaswini fisheries,industry-1 , Udupi, Balkudru has not been operating. It has acquired the consent for operating from the Board. The consent was valid upto 30-06-2017. However, as per ref(3) the consent for operation was sought to be renewed and the same was forwarded to the Senior Environmental Officer, Mangalore for further action.

That since there were objections from the public, the Senior Environmental Officer, Mangalore forwarded the same to the Central Board office as per ref (5).
Further a consent for operation was sought for the functioning of M/s Yashaswini Fisheries unit -2 as per ref(6). As on 19-02-2018 a spot inspection was conducted

81

and as a result of the same the applicant was asked to comply with all the conditions laid down. On the said ground the said application was returned. (attached)

All of the above is brought to your kind notice.

Yours' faithfully,
Environmental Authority,
Karamaniman,
Udupi

Copies to: As mentioned above

82

ANNEX-T

**ಕರ್ನಾಟಕ ಸರಕಾರ**

(ಕಂದಾಯ ಇಲಾಖೆ)

ಉಪವಿಭಾಗದ ದಂಡಾಧಿಕಾರಿಯವರ ಕಛೇರಿ, ಕುಂದಾಪುರ ಉಪವಿಭಾಗ, ಕುಂದಾಪುರ

ಕಛೇರಿ ದೂರವಾಣಿ ಸಂಖ್ಯೆ: 08254-231984 ಇ-ಮೇಲ್ - ackundapur@gmail.com

---

ನಂ: ಎಂಎಜಿ ಪಿಆರ್ 1/2016-17

ದಿನಾಂಕ 20-03-2018

ರಿಗೆ,

ಉಪನಿರ್ದೇಶಕರು,
ಮೀನುಗಾರಿಕೆ ಇಲಾಖೆ, ಮಲ್ಪೆ, ಉಡುಪಿ

ಮಾನ್ಯರೇ,

ವಿಷಯ:- ಉಡುಪಿ ತಾಲೂಕು ಬಾಳಕುದ್ರು ಗ್ರಾಮದಲ್ಲಿನ ಫಿಶ್ ಕಟ್ಟಿಂಗ್/ ಫಿಶ್ ಪೌಡರ್ ಘಟಕವು ಕಾರ್ಯನಿರ್ವಹಿಸುತ್ತಿರುವ ಕುರಿತು

ಉಲ್ಲೇಖ:- 1) ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ದಾಖಲಾದ ರಿಟ್ ಪಿಟಿಷನ್ ನಂ: 53063/2016 ರ ಅಂತಿಮ ಆದೇಶ ದಿನಾಂಕ: 27-01-2017
2) ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ದಾಖಲಾದ ರಿಟ್ ಅಪೀಲು ನಂ: 1570/2017 ರ ಮಧ್ಯಂತರ ಆದೇಶ ದಿನಾಂಕ: 20-03-2017
3) ದಿನಾಂಕ: 08-03-2018 ರಂದು ನಡೆಸಿದ ಸ್ಥಳ ತನಿಖೆ
4) ಈ ಕಛೇರಿ ಸಮಸಂಖ್ಯೆ ಪತ್ರ ದಿನಾಂಕ: 09-03-2018
5) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕೆ ಉಪವಿಭಾಗ, ಉಡುಪಿ ಇವರ ಪತ್ರ ಸಂ: ಸಕಾಇಂ:ಬಂಮೀಉವಿ:ಉಡುಪಿ: ಬಾಳಕುದ್ರು ಫಿಶ್ ಘಟಕ: 2017-18: 1145, ದಿನಾಂಕ: 16-03-2018

***********

ವಿಷಯಕ್ಕೆ ಸಂಬಂಧಿಸಿದಂತೆ ಉಡುಪಿ ತಾಲೂಕು ಬಾಳಕುದ್ರು ಗ್ರಾಮದಲ್ಲಿ ಶ್ರೀ ಕೇಶವ ಕುಂದರ್ ಹಾಗೂ ಶ್ರೀಮತಿ ಉಮಾದೇವಿ ಕೋಂ ಕೇಶವ ಕುಂದರ್ ಇವರುಗಳ ಮಾಲೀಕತ್ವದಲ್ಲಿರುವ ಫಿಶ್ ಕಟ್ಟಿಂಗ್ ಮತ್ತು ಫಿಶ್ ಪೌಡರ್ ಎರಡೂ ಘಟಕಗಳಿಗೆ ಸಂಬಂಧಿಸಿದಂತೆ ತಮ್ಮ ಇಲಾಖೆಯಿಂದ ನೀಡಲಾದ ಅನುಮತಿ/ ಪರವಾನಿಗೆ/ ನಿರಾಕ್ಷೇಪಣಾ ಪತ್ರ ಇತ್ಯಾದಿಗಳ ಬಗ್ಗೆ ಮಾಹಿತಿ ಹಾಗೂ ಅವುಗಳನ್ನು ಎಲ್ಲಿಯವರೆಗೆ ನವೀಕರಣ ಮಾಡಲಾಗಿದೆ ಎಂಬ ಮಾಹಿತಿಯನ್ನು ನೀಡುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿ ಇವರಿಗೆ ಉಲ್ಲೇಖ(4) ರ ಈ ಕಛೇರಿ ಪತ್ರದಲ್ಲಿ ತಿಳಿಸಲಾಗಿತ್ತು (ಪ್ರತಿ ಲಗ್ತೀಕರಿಸಿದೆ).

ಸದ್ರಿ ಪತ್ರಕ್ಕೆ ಸಂಬಂಧಿಸಿದಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕೆ ಉಪವಿಭಾಗ, ಉಡುಪಿ ಇವರು ಕೋರಿರುವ ಮಾಹಿತಿಯು ಈ ಉಪವಿಭಾಗದ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಸಿರುತ್ತಾರೆ. ಕೋರಿರುವ ಮಾಹಿತಿಯು ತಮ್ಮ ಕಾರ್ಯವ್ಯಾಪ್ತಿಗೆ ಬರುವುದಾಗಿ ತಿಳಿದುಬಂದಿರುವುದರಿಂದ ಉಲ್ಲೇಖ(4) ರ ಪತ್ರದಲ್ಲಿ ಕೋರಿರುವ ಮಾಹಿತಿಯನ್ನು ಮೂರು ದಿನಗಳೊಳಗಾಗಿ ಈ ಕಛೇರಿಗೆ ಕಳುಹಿಸಲು ತಿಳಿಸಿದೆ.

63/2018-19

ತಮ್ಮ ವಿಶ್ವಾಸಿ,

ಸಹಾಯಕ ಕಮೀಷನರ್,
ಕುಂದಾಪುರ

ಪ್ರತಿ:- ಮಾನ್ಯ ಜಿಲ್ಲಾಧಿಕಾರಿಯವರು, ಉಡುಪಿ ಜಿಲ್ಲೆ, ಉಡುಪಿ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

20/3/18

83

Annex- T [English Translation]

Office of the Tahsildar, Brahmavara-576213, Brahmavara Taluk and Udupi District
Tel: 0820-2560492 (Ka). Fax: 0829-2560492. e-mail: mthasildarbrahmavara@gmail.com

ALN CR 238/2017-18 Dated: 20-03-2018

To,
Respected Assistant Commissioner,
Kundapura Sub division,
Kundapura.

Respected Sir,
Sub: Regarding the operations of the Fish Cutting and Fish Powder units located at Udupi Taluk, Balkudru Grama.
Ref: Letter from your office, Letter No. MAG PR 1/2016-17 dated:20-03-2018
With respect to the aforementioned, information was sought, regarding the Fish cutting and Fish Powder Units that are under the ownership of Sri. Keshava Kundar and Smt. Umadevi W/o Keshava Kundar located at Udupi Taluk, Balkudru Grama to whom your department had granted the permission/ license/ disclaimer etc granted to these industries and up to when have the same been renewed as per reference no.(1).
As per the inspection conducted with respect to Survey No.71/3, 0.31 Acres at Balkudru Grama a conversion order No. AAL N S R 329/2013-14 was granted by the Tahsildar, Brahmavara on 01-02-2014 for the purpose of ice plant. However, it is to brought to your notice that the Khatha holder Smt. Umadevi has violated the said conversion order and is using the said land for the purpose of Fish cutting as against her request for conversion for the establishment of an ice plant.
However, due to the inconvenience caused by the said unit, the residents in the vicinity filed a complaint and a proceeding took place before the Special Tahsildar, Brahmavara vide Proceeding No. AAL N S R:238/2016-17 dated 01-02-2017 wherein the conversion order granted for the Survey No. 71/3, 0.31 Acres for the purpose of establishment of an ice plant was cancelled.

Yours' faithfully,
Tahsildar, Brahmavara
Brahmavara Taluk, Udupi District

GOVERNMENT OF KARNATAKA

84

ANNEX-U

ಕರ್ನಾಟಕ ಸರ್ಕಾರ

ತಹಸೀಲ್ದಾರರ ಕಾರ್ಯಾಲಯ, ಬ್ರಹ್ಮಾವರ - 576 213, ಬ್ರಹ್ಮಾವರ ತಾಲ್ಲೂಕು ಮತ್ತು ಉಡುಪಿ ಜಿಲ್ಲೆ.

ದೂರವಾಣಿ:0820-2560492 (ಕ), ಫ್ಯಾಕ್ಸ್:0820-2560492, ಇಮ್ಮೇಲ್: thasildarbrahmavara@gmail.com

ಎ ಎಲ್ ಎನ್ ಸಿಆರ್ 235/2017-18 [illegible]

ಇವರಿಗೆ,
[illegible]
ಕುಂದಾಪುರ [illegible]
ಕುಂದಾಪುರ

ಮಾನ್ಯರೇ,

[illegible]

[illegible]

ತಮ್ಮ ನಂಬುಗೆಯ

ತಹಶೀಲ್ದಾರರು
ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ

03/2018-19

85

ANNEX-U [ENGLISH TRANSLATION]

GOVERNMENT OF KARNATAKA
Department of Revenue
Office of the Sub divisional Magistrate, Kundapura Sub division, Kundapura
Office Tel: 08254-231984 e-mail:ackundapur@gmail.com

No. MAG PR 1/2016-17 Dated: 20-03-2018

To,
Deputy Director,
Fisheries Department,
Malpe, Udupi

Respected Sir,

Sub: Regarding the operations of the Fish Cutting and Fish Powder units located at Udupi Taluk, Balkudru Grama.

Ref:1. Order and judgement passed by the Hon'ble High Court in Writ Petition No.53083/2016 dated 27-01-2017

2. Interim order passed by the Hon'ble High Court in Writ Petition No.1570/2017 dated 20-03-2017

3. Spot inspection conducted on 08-03-2018

4. Letter from this office dated 09-03-2018

5. Letter from the Assistant Executive Engineer of Port and fisheries department, Udupi, Letter No. Sa. Ka. Im: Ban Mi U V: Udupi: Balkudru Fish Industry:2017-18: 1145, dated: 16-03-2018

With respect to the aforementioned, information was sought, regarding the Fish cutting and Fish Powder Units that are under the ownership of Sri. Keshava Kundar and Smt. Umadevi W/o Keshava Kundar located at Udupi Taluk, Balkudru Grama and the permission/ license/ disclaimer etc granted to these industries by your department and up to when have the same been renewed. The same was communicated via a letter to the Assistant Executive Engineer of Port and fisheries department, Udupi as per ref (4). (Letter attached).

It is however to be brought to your knowledge that in connection to the same the information sought by the Assistant Executive Engineer of Port and fisheries department, Udupi does not fall under the jurisdiction of this sub division. It is also brought to your notice that since the matter in discussion falls under your jurisdiction, you are kindly requested to provide the information to this office as asked for in the letter mentioned above as ref (4) within three days.

Yours' faithfully,
Assistant Commissioner,
Kundapura

The same has been submitted to the Respected District Authority, Udupi District, Udupi.

86

ANNEX-V

## ಕರ್ನಾಟಕ ಸರಕಾರ

### ತಹಶೀಲ್ದಾರರ ಕಛೇರಿ ಬ್ರಹ್ಮಾವರ ತಾಲ್ಲೂಕು ಉಡುಪಿ ಜಿಲ್ಲೆ 576213

Office : 0820 -2560494 (O), 2560494( F), E-Mail: tahsildabrahmavara @gmail.com

ಎನ್.ಸಿ.ಅರ್. ಸಿಅರ್ 64 / 2017.18 ದಿನಾಂಕ 10--07-2018

**ತಿಳುವಳಿಕೆ ನೋಟೀಸು**

ವಿಷಯ: ಬ್ರಹ್ಮಾವರ ತಾಲೂಕು ಬಾಳಕುದ್ರು ಗ್ರಾಮದ ಸರ್ಕಾರಿ ಪೊರಂಬೋಕು ಜಮೀನಾದ ಸ.ನಂಬ್ರ 72/22ಎ ಮತ್ತು 72/21ಎ ಜಮೀನನ್ನು ಆಕ್ರಮಿಸಿಕೊಂಡು ಕಾಂಪಾಂಡು ಗೋಡೆ ನಿರ್ಮಿಸಿ ಸ್ವಾಧೀನ ಹೊಂದಿರುವುದನ್ನು ತೆರವುಗೊಳಿಸುವ ಕುರಿತು .

ಉಲ್ಲೇಖ: 1)ಥೋಮಸ್ ರೋಡ್ರಿಗಸ್ ಬಿನ್: ಪೌಲ್ ರೋಡ್ರಿಗಸ್ ಐರೋಡಿ ಗ್ರಾಮ & ಅಂಚೆ ಬ್ರಹ್ಮಾವರ ತಾಲೂಕು ಇವರ ದೂರು ಅರ್ಜಿ.

2)ಮಾನ್ಯ ಸಹಾಯಕ ಕಮೀಷನರರು ಕುಂದಾಪುರ ಇವರ ಪತ್ರ ಸಂಖ್ಯೆ / NCR / CR/ 316/16-17 ದಿನಾಂಕ 28-1-2017

3)ಪರ್ಯಾವೇಕ್ಷಕರು ಬ್ರಹ್ಮಾವರ ಇವರ ವರದಿ ದಿ: 9-10-2017.

4)ಕಂದಾಯ ನಿರೀಕ್ಷಕರು ಕೋಟ ಇವರ ವರದಿ ಐಅರ್ 1454/17-18

5)ದಿನಾಂಕ 9-7-2018 ರ ಸ್ಥಳ ತನಿಖಾ ಟಿಪ್ಪಣಿ .

•••••

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ತರಿಸಲಾದ ಕಂದಾಯ ನಿರೀಕ್ಷಕರ ವರದಿ ಹಾಗೂ ಮೋಜಣಿ ವರದಿಯಂತೆ ಬಾಳಕುದ್ರು ಗ್ರಾಮದ ಸ.ನಂಬ್ರ 72/22ಎ & 72/21ಎ ರ ಸರಕಾರಿ ಪೊರಂಬೋಕು ಜಮೀನನ್ನು ಶ್ರೀಮತಿ ಉಮಾದೇವಿ, ಕೋಂ: ಕೇಶವ ಕುಂದರ್, ಬಾಳಕುದ್ರು ಗ್ರಾಮ ಇವರು ಆಕ್ರಮಿಸಿಕೊಂಡು ಜಮೀನಿನ ಸುತ್ತಲೂ ಕಾಂಪಾಂಡು ಗೋಡೆ ನಿರ್ಮಿಸಿರುವುದು ತನಿಖಾ ವರದಿಯಿಂದ ದೃಢಪಟ್ಟಿರುತ್ತದೆ.

ಈ ವಿಚಾರದಲ್ಲಿ ಉಲ್ಲೇಖ(5) ರಂತೆ ಆಕ್ರಮಿತ ಜಮೀನಿನ ಸ್ಥಳ ತನಿಖೆ ನಡೆಸಿದ್ದು, ಈ ಸಮಯದಲ್ಲಿ ಒತ್ತುವರಿದಾರರು ತಾವು ಆಕ್ರಮಿಸಿಕೊಂಡಿರುವ ಜಮೀನು ಬಂದರು ಇಲಾಖೆಗೆ ಸೇರಿದ ಜಮೀನಾಗಿದ್ದು, ಈ ಬಗ್ಗೆ ಸ್ಥಳ ಬಾಡಿಗೆಯನ್ನು ಕೂಡಾ ಬಂದರು ಇಲಾಖೆಗೆ ಪಾವತಿಸುತ್ತಿರುವುದಾಗಿ ಒತ್ತುವರಿದಾರರು ಸ್ಥಳ ತನಿಖಾ ಸಮಯದಲ್ಲಿ ತಿಳಿಸಿರುತ್ತಾರೆ.

ಆದುದರಿಂದ ಈ ಪ್ರಕರಣದ ನಿಜಾಂಶ ತಿಳಿದುಕೊಳ್ಳುವ ಸಲುವಾಗಿ ದಿನಾಂಕ **21-07-2018** ರಂದು ಅಪರಾಹ್ನ 3.00 ಗಂಟೆಗೆ ಈ ಕಛೇರಿಯಲ್ಲಿ ವಿಚಾರಣೆಗೆ ದಿನಾಂಕ ನಿಗಧಿಪಡಿಸಿದ್ದು, ಸದ್ರಿ ದಿನಾಂಕದಂದು ತಮ್ಮಲ್ಲಿ ಲಭ್ಯವಿರುವ ಆಗತ್ಯ ದಾಖಲೆಗಳೊಂದಿಗೆ ಈ ಕಛೇರಿಯಲ್ಲಿ ವಿಚಾರಣೆಗೆ ಹಾಜರಾಗಬೇಕಾಗಿ ತಿಳಿಯಪಡಿಸಿದೆ.

TRUE COPY
NOTARY UDUPI

ತಹಶೀಲ್ದಾರರು
ಬ್ರಹ್ಮಾವರ ತಾಲ್ಲೂಕು ಉಡುಪಿ ಜಿಲ್ಲೆ

ಇವರಿಗೆ

1)ಬಂದರು ಅಧಿಕಾರಿಯವರು ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆ, ಹಂಗಾರಕಟ್ಟೆ ಇವರಿಗೆ

2)ಶ್ರೀ ಥೋಮಸ್ ರೋಡ್ರಿಗಸ್, ಬಿನ್: ಪೌಲ್ ರೋಡ್ರಿಗಸ್, ಐರೋಡಿ ಗ್ರಾಮ & ಅಂಚೆ ಬ್ರಹ್ಮಾವರ ತಾಲೂಕು ,

3)ಶ್ರೀಮತಿ ಉಮಾದೇವಿ, ಕೋ: ಕೇಶವ ಕುಂದರ್ ಬಾಳಕುದ್ರು ಗ್ರಾಮ ಬ್ರಹ್ಮಾವರ ತಾಲೂಕು -

ಪ್ರತಿಯನ್ನು ಜಾರಿ ಬಗ್ಗೆ ಕಂದಾಯ ನಿರೀಕ್ಷಕರು ಕೋಟ ಇವರಿಗೆ

4)ಇಂದಿರಾ , ಗ್ರಾಮ ಪಂಚಾಯತ್ ಸದಸ್ಯರು ಬಾಳಕುದ್ರು .ಐರೋಡಿ ಗ್ರಾಮ ಪಂಚಾಯತ್,

5)ಬೇಬಿ, ಗ್ರಾಮ ಪಂಚಾಯತ್ ಉಪಾಧ್ಯಕ್ಷರು, ಬಾಳಕುದ್ರು, ಐರೋಡಿ ಗ್ರಾಮ ಪಂಚಾಯತ್

6)ಸುರೇಶ ಅಡಿಗ , ಅಧ್ಯಕ್ಷರು ಬಾಳಕುದ್ರು ಹೋರಾಟ ಸಮಿತಿ, ಬಾಳಕುದ್ರು .

7)ರವೀಂದ್ರ ಸುವರ್ಣ, ಅಧ್ಯಕ್ಷರು, ಬಾಳಕುದ್ರು ಶಾಲಾ ಸಮಿತಿ , ಬಾಳಕುದ್ರು.

87

ANNEX-V [ENGLISH TRANSLATION]

GOVERNMENT OF KARNATAKA

Office of the Tahsildar, Brahmavara, Brahmavara Taluk and Udupi District-576213

Office: 0820-256049(O), 2560494 (F) e-mail:tahsildabrahmavara@gmail.com

N.C.R.CR 64/2017.18 Dated: 10-07-2018

Notice of Information

Sub: Information regarding the encroachment and building of a compound wall and illegal occupancy of government land in Survey No. 72/22A and 72/21A at Brahmavara Taluk, Balkudru Grama.

Ref: 1. Petition filed by Thomas Rodriguez S/o Paul Rodriguez Irody grama post Brahmavara Taluk.

2. Letter from the Assistant Commmissioner, letter No. NCR/CR/316/16-17 dated 28-1-2017

3. Substitutes of Brahmavara report dated 09-10-2017

4. Report of the Revenue department IR 1454/17-18

5. Note of the spot inspection dated 09-07-2018

With respect to the above referred reports it has been confirmed that Smt.Umadevi W/o Keshava Kundar of Balkudru Grama have encroached and illegally built a compound wall around Survey No. 72/22A and 72/21A at Brahmavara Taluk, Balkudru Grama which is in reality a government land.

As per the spot inspection in ref (5) it was also noted that the said land belonged to the Port Department and the rent for the same is also being paid to the Port Department.

Due to the above reasons, in order to further investigate and find the parties are hereby called to be present before this office along with relevant documents on 21-07-2018 at 3 pm without fail.

Tahsildar
Brahmavara Taluk
Udupi District

Copies to:

1. Port Authority, Port and Inland Transport Department, Hangarakatte.
2. Sri. Thomas Rodriguez S/o Paul Rodriguez Irody grama post Brahmavara Taluk.
3. Smt.Umadevi W/o Keshava Kundar of Balkudru Grama,. Brahmavara Taluk.

Copy to the Revenue Department.

4.Indira, Member of Grama Panchayath, Balkudru, Irody Grama Panchayath.
5. Baby, Vice President of Balkudru, Irody Grama Panchayath.
6. Suresh Adiga, President of Balkudru Protest (Horaata) Committee, Balkudru
7. Ravindra Suvarna, President of Balkudru School Committee, Balkudru.

Annex-W

88

ಕ್ರಮ ಸಂಖ್ಯೆ/ಭೂಮಿ/ಸಿಆರ್-1/2018-19

ಬಂದರು ಉಪ ಸಂರಕ್ಷಣಾಧಿಕಾರಿಯವರ ಕಚೇರಿ,
ಹಂಗಾರಕಟ್ಟಾ -576118, ದಿನಾಂಕ:21-7-2018

ರಿಗೆ,

ತಹಶೀಲ್ದಾರ್.
ಬ್ರಹ್ಮಾವರ ತಾಲುಕು.
ಉಡುಪಿ. ಜಿಲ್ಲೆ.

ಮಾನ್ಯರೇ.

ವಿಷಯ:-ಹಂಗಾರಕಟ್ಟೆ ಬಂದರು- ಬ್ರಹ್ಮಾವರ ತಾಲ್ಲೂಕು ಬಾಳಕುದ್ರು, ಗ್ರಾಮದ ಸರ್ಕಾರಿ ಪೋರಂಬೋಕು ಜಮೀನಾದ ಸ. ಸಂಬ್ರ 72/22ಎ ಮತ್ತು 72/21ಎ ಜಮೀನನ್ನು ಅಕ್ರಮಿಸಿಕೊಂಡು ಕಾಂಪಾಂಡು ಗೋಡೆ ನಿರ್ಮಿಸಿ ಸ್ವಾಧೀನ ಹೊಂದಿರುವುದನ್ನು ತೆರವುಗೊಳಸುವ ಕುರಿತು.

ಉಲ್ಲೇಖ:- ತಹಶೀಲ್ದಾರ್. ಬ್ರಹ್ಮಾವರ ಅವರ ಪತ್ರ ಸಂ ಎನ್.ಸಿ.ಆರ್.ಸಿಆರ್-64/2017.18 ದಿನಾಂಕ 10.7.2018

**************

ಮೇಲಿನ ವಿಷಯದಲ್ಲಿ ಉಲ್ಲೇಖಿತ ಪತ್ರಕ್ಕೆ ತಿಳಿಯಪಡಿಸುವುದೇನೆಂದರೇ, ಬಾಳಕುದ್ರು ಗ್ರಾಮದ ಸರ್ವೆ ನಂಬ್ರ 72/22ಎ ಮತ್ತು 72/21ಎ ರಲ್ಲಿ 200.00 ಚ.ಮೀ ಸ್ಥಳವನ್ನು ಬಂದರು ಇಲಾಖೆಯಿಂದ ಸರಕಾರದ ಆದಾಯ ಹಿತ ದೃಷ್ಟಿಯಿಂದ ಶ್ರೀ. ಈಶ್ವರಿ ಕೆ. ಪಣೀಕರ್, ಮೇ. ಇಂಡ್ ಕ್ರಾಫ್ಟ್ ಮೆಟಲಿಕ್ಸ್, ಕಂಪೌಂಡ್, ಎಂ.ಸಿ. ರೋಡ್, ನಲಂಚಿರಾ, ತ್ರಿವೇಂಡ್ರಮ್, ಕೇರಳ, ಅವರಿಗೆ ನೆಲಶುಲ್ಕದ ಆಧಾರದ ಮೇಲೆ ನೀಡಲಾಗಿರುತ್ತದೆ.

ಸದ್ರಿ ಸ್ಥಳ ಭಾರತೀಯ ಬಂದರು ಅಧಿನಿಯಮ, 1908 ರಂತೆ ಸರಕಾರದ ಅಧಿಸೂಚನೆ ಸಂ PWD 35 ESP 62-2 ದಿನಾಂಕ: 24.1.1963 ಮತ್ತು ಅಧಿಸೂಚನೆ ಸಂ ಪಿಡಬ್ಲ್ಯುಡಿ 142 ಪಿಎಸ್‌ಪಿ 2011 ದಿ:13.8.2013 ರಂತೆ (ಪ್ರತಿ ಲಗ್ತೀಕರಿಸಿದೆ) ಹಂಗಾರಕಟ್ಟೆ ಬಂದರು ಘೋಷಿತ ಪ್ರದೇಶದ ಸರಹದ್ದಿನ ಒಳಗೆ ಇರುವುದರಿಂದ ಈ ಮೇಲಿನವರಿಗೆ ನೀಡಲಾಗಿದೆ.

ತಮ್ಮ ವಿಶ್ವಾಸಿ.

ಬಂದರು ಉಪ ಸಂರಕ್ಷಣಾಧಿಕಾರಿ
ಹಂಗಾರಕಟ್ಟೆ - 576 218

ಮಾಹಿತಿ ಹಕ್ಕು ಅಧಿನಿಯಮ 2005 ರಡಿ
ಮಾಹಿತಿಗಾಗಿ ಪ್ರತಿ ನೀಡಿದೆ

ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ
ತಹಶೀಲ್ದಾರರ ಕಚೇರಿ
ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ

GOVT. OF INDIA
NOTARY

TRUE COPY
NOTARY UDUPI

Annex-W [English Translation] 89

Grama No./Bhoomi/CR-1/2018-19
Office of the Port Conservation Authority Hangaratta-576118
Dated:21-07-2018

To,

Tahsildar,
Brahmavara Taluk,
Udupi District.

Respected Sir,

Sub: Regarding the encroachment and building of a compound wall and illegal occupancy of government land in Survey No. 72/22A and 72/21A at Hangaratta Port-Brahmavara Taluk, Balkudru Grama.

Ref: Letter of the Tahsildar, Brahmavara, letter No. N.C.R.CR- 64/2017.18 dated 10-07-2018.

With respect to the aforementioned, it is brought to your knowledge that, 200.00 Cha. Mi. of Survey No. 72/22A and 72/21A at, Balkudru Grama has been given in the interest of the Port department to Sri. Ishwar K. Panniker, M/s Ind Craft Metalling, Compound, M.C. Road, Nalanchira, Trivandrum, Kerala.

The said land has been issued under the Indian Port Act,1908, according to Government notice No.PWD 35 ESP 62-2 dated 24-2-1963 and notice No. PWD 142 ESP 2011 dated 13-08-2013 (letter has been attached) as the land falls within the limits of the Hangarakatte Port region.

Yours' faithfully,
Port Conservation Authority
Hangarakatte-576218

90

ANNEX - X

## ಸಹಾಯಕ ಕಮೀಷನರ್ ಕುಂದಾಪುರ ಉಪ ವಿಭಾಗ, ಕುಂದಾಪುರ ಇವರ ನ್ಯಾಯಾಲಯದಲ್ಲಿ

ನಂ.ಸಿಡಿಸ್. RD0050000183340/.ಆರ್.ಎ. 228/2018. ದಿನಾಂಕ: 24.9.18

ಉಪಸ್ಥಿತರು:- ಟಿ. ಭೂಬಾಲನ್, ಐ.ಎ.ಎಸ್.
ಉಪವಿಭಾಗಾಧಿಕಾರಿಯವರು,
ಕುಂದಾಪುರ ಉಪ ವಿಭಾಗ, ಕುಂದಾಪುರ

| ಮೇಲ್ಮನವಿದಾರರು | | ಪ್ರತಿವಾದಿಗಳು |
|---|---|---|
| ಉಮಾ ದೇವಿ<br>ಬಿನ್ ನಾಗವೇಣಿ,<br>ಬಾಳಕುದ್ರು ಗ್ರಾಮ, ಬ್ರಹ್ಮಾವರ ತಾಲ್ಲೂಕು.<br>(ನ್ಯಾಯವಾದಿ ಟಿ. ಬಿ. ಶೆಟ್ಟಿ, ಕುಂದಾಪುರ ಇವರ ಮೂಲಕ ಪ್ರತಿನಿಧಿಸುತ್ತಾರೆ.) | ಮತ್ತು | ತಹಶೀಲ್ದಾರರು,<br>ಬ್ರಹ್ಮಾವರ ತಾಲ್ಲೂಕು. |

ಮೇಲ್ಮನವಿದಾರರು ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 136(2) ರನ್ವಯ ಪ್ರತಿವಾದಿಯವರು ಹೊರಡಿಸಿದ ಆದೇಶ ನಂಬ್ರ ಎಎಲ್‌ಎನ್.ಎಸ್‌ಆರ್ 238/2016-17 ದಿನಾಂಕ 01-02-2017 ರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದಾರೆ. (ಇದನ್ನು ಇನ್ನು ಮುಂದೆ ಪ್ರಶ್ನಿತ ಆದೇಶ ಎಂದು ಕರೆಯಲಾಗುವುದು)

ಈ ಮೇಲ್ಮನವಿಯಲ್ಲಿ ಬ್ರಹ್ಮಾವರ ತಾಲೂಕು ಬಾಳ್ಕುದ್ರು ಗ್ರಾಮದ ಸ.ನಂಬ್ರ 71/3 ರಲ್ಲಿ 0.31 ಎಕ್ರೆ ಜಮೀನು (ಮೇಲ್ಮನವಿಯಲ್ಲಿ ಕಾಣಿಸಿದಂತೆ) ಒಳಗೊಂಡಿರುತ್ತದೆ. (ಇದನ್ನು ಇನ್ನು ಮುಂದೆ ವಿಚಾರಣಾಧೀನ ಜಮೀನು ಎಂದು ಕರೆಯಲಾಗುವುದು).

ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಗಳಿಗೆ ನಿಯಮಾನುಸಾರ ವಿಚಾರಣಾ ನೋಟೀಸು ಜ್ಯಾರಿಗೊಳಿಸಲಾಗಿದೆ.

ಮೇಲ್ಮನವಿದಾರರು ಕೆಳಕಂಡ ಕಾರಣಗಳಿಗಾಗಿ ಮೇಲ್ಮನವಿಯನ್ನು ಪುರಸ್ಕರಿಸಲು ಕೋರಿರುತ್ತಾರೆ.

1. ಪ್ರತಿವಾದಿಯವರು ಮೇಲ್ಮನವಿದಾರರು ಸಲ್ಲಿಸಿದ ಕೋರಿಕೆಯಂತೆ ಸ.ನಂಬ್ರ 71/3 ರಲ್ಲಿ 0.31 ಎಕ್ರೆ ಜಮೀನನ್ನು ಕೈಗಾರಿಕಾ ಉದ್ದೇಶಕ್ಕೆ ಉಪಯೋಗಿಸಲು ತಮ್ಮ ನಂಬ್ರ ಬಿಡಿಸ್.ಎಎಲ್‌ಎನ್.ಎಸ್‌ಆರ್ 329/2012-14 ದಿನಾಂಕ 01-02-2014 ರಂತೆ ಅನುಮತಿಯನ್ನು ನೀಡಿದ್ದಾಗಿದೆ. ನಂತರ ಜಮೀನನ್ನು ಕೈಗಾರಿಕಾ ಉದ್ದೇಶಕ್ಕೆ ಅನುಮತಿ ನೀಡಿದ್ದರೂ ಬ್ರ್ಯಾಕೆಟಿನಲ್ಲಿ "ಐಸ್‌ಪ್ಲ್ಯಾಂಟ್" ಎಂದು ಬೇರೆ ಅಕ್ಷರದಿಂದ ಬರೆದಿರುತ್ತಾರೆ. ಕರ್ನಾಟಕ ಭೂ ಕಂದಾಯ ಅಧಿನಿಯಮದ ಮೂಲ ಆಶಯದ ಪ್ರಕಾರ ಯಾವುದೇ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಬಳಸಲು ಸಕ್ಷಮ ಪ್ರಾಧಿಕಾರದ ಒಪ್ಪಿಗೆ ಬೇಕಾಗಿದ್ದು, ಭೂ ಪರಿವರ್ತನಾ ಶುಲ್ಕವನ್ನು , ವಾಸ್ತವ್ಯ , ವಾಣಿಜ್ಯ ಮತ್ತು ಕೈಗಾರಿಕೆ ಉದ್ದೇಶ ಬೇರೆ ಬೇರೆಯಾಗಿದ್ದು, ಆ ರೀತಿ ಶುಲ್ಕ ಪಾವತಿಸಿ ಮೇಲೆ ಹೇಳಿದ ಮೂರರಲ್ಲಿ ಯಾ ಉದ್ದೇಶಕ್ಕೆ ಒಪ್ಪಿಗೆ ನೀಡಲಾಗಿದೆಯೋ ಆ ಉದ್ದೇಶವನ್ನು ಹೊರತುಪಡಿಸಿ ಬೇರೆ ಉದ್ದೇಶಕ್ಕೆ ಸದ್ರಿ ಭೂಮಿಯನ್ನು ಬಳಸಿದರೆ ಮಾತ್ರ ಅಧಿನಿಯಮದ ಉಲ್ಲಂಘನೆಯಾಗುತ್ತದೆ. ಕೈಗಾರಿಕೆ ಉದ್ದೇಶಕ್ಕೆ ಭೂ ಪರಿವರ್ತನೆ ಒಪ್ಪಿಗೆ ಪಡೆದ ಭೂಮಿಯಲ್ಲಿ ಯಾವ ರೀತಿ ಕೈಗಾರಿಕೆ ಸ್ಥಾಪಿಸಬೇಕೆನ್ನುವುದು ಜಮೀನಿನ ಮಾಲೀಕರ ಹಕ್ಕು ಆಗಿರುತ್ತದೆ. ಹೀಗಾಗಿ ಮೇಲ್ಮನವಿದಾರರು ಸದ್ರಿ ಜಮೀನಿನಲ್ಲಿ ಫಿಶ್ ಪೌಡರ್ ಕಾರ್ಖಾನೆ ಸ್ಥಾಪಿಸಿದ್ದು ಯಾವುದೇ ಕಾನೂನಿನ ಉಲ್ಲಂಘನೆ ಆಗಿರುವುದಿಲ್ಲ.

2. ವಿಚಾರಣಾಧೀನ ಜಮೀನಿನ ಭೂ ಪರಿವರ್ತನಾ ಆದೇಶವನ್ನು ಯಾಕೆ ರದ್ದುಪಡಿಸಬಾರದು ಎಂದು ಕಾರಣ ಕೇಳಿ ನೀಡಿದ ನೋಟಿಸಿಗೆ ಉತ್ತರವನ್ನು ಮೇಲ್ಮನವಿದಾರರು ತಮ್ಮ ಪರ ನ್ಯಾಯವಾದಿಗಳ ಮೂಲಕ ನೀಡಿರುತ್ತಾರೆ. ಆದರೂ ಪ್ರತಿವಾದಿಯವರು ವಿಚಾರಣಾಧೀನ ಜಮೀನಿಗೆ ನೀಡಿದ ಭೂ ಪರಿವರ್ತನೆ ಅನುಮತಿಯನ್ನು ಪ್ರಶ್ನಿತ ಆದೇಶದಂತೆ ರದ್ದುಪಡಿಸಿರುವುದು ಕಂಡು ಬಂದಿದ್ದಾಗಿದೆ. ಭೂ ಕಂದಾಯ ಕಾಯ್ದೆ ಕಲಂ 95(2) ರಲ್ಲಿ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಬಳಸಲು ಅನುಮತಿಯನ್ನು ನೀಡುವ ಅಧಿಕಾರ ಮಾತ್ರ ಕಂದಾಯ ಅಧಿಕಾರಿಗೆ ಇರುವುದೇ ಹೊರತು ಹಾಗೆ ಅನುಮತಿ ನೀಡಿದ ಸ್ಥಳದಲ್ಲಿ ಯಾವ ಉದ್ಯಮ ಸ್ಥಾಪಿಸಬೇಕೆಂದು ನಿರ್ಬಂಧ ಹಾಕುವ ಅಧಿಕಾರ ಭೂ ಪರಿವರ್ತನಾ ಅನುಮತಿ ನೀಡುವ ಅಧಿಕಾರಿಗೆ ಇರುವುದಿಲ್ಲ. ಆದ್ದರಿಂದ ಮೇಲ್ಮನವಿಯನ್ನು ಪುರಸ್ಕರಿಸಿ, ಪ್ರಶ್ನಿತ ಆದೇಶವನ್ನು ರದ್ದುಪಡಿಸಬೇಕು ಎಂದು ಕೋರಿರುತ್ತಾರೆ.

ಆರ್.ಟಿ.ಐ/332/2019
ಮಾಹಿತಿ ಹಕ್ಕು ಪ್ರತಿ

ಅಧೀಕ್ಷಕರು
ಜಿಲ್ಲಾಧಿಕಾರಿಯವರ ಕಛೇರಿ

91

ಮೇಲ್ಮನವಿದಾರರ ಪರ ನ್ಯಾಯವಾದಿಯವರ ಪ್ರತಿಪಾದನೆಯನ್ನು ಆಲಿಸಲಾಯಿತು ಹಾಗೂ ಲಭ್ಯ ದಾಖಲೆಯನ್ನು ಪರಿಶೀಲಿಸಲಾಗಿದೆ.

ಈಗ ನನ್ನ ಮುಂದಿರುವ ಪ್ರಶ್ನೆ ಎಂದರೆ.

ಪ್ರತಿವಾದಿಯವರ ಪ್ರಶ್ನಿತ ಆದೇಶ ಕ್ರಮಬದ್ಧವೇ?

ಉತ್ತರ:- ಹೌದು

ಕಾರಣಗಳು:- (1) ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಯಿತು. ತಹಶೀಲ್ದಾರರು ಬ್ರಹ್ಮಾವರ ಇವರು ತಮ್ಮ ನಂಬ್ರ ಜಿಡಿಸ್ ಎಎಲ್‌ಎನ್.ಎಸ್‌ಆರ್ .329/2013-14 ದಿನಾಂಕ 01-02-2014 ರ ಪ್ರತಿಯನ್ನು ಪರಿಶೀಲಿಸಲಾಗಿ ಮೇಲ್ಮನವಿದಾರರಿಗೆ ಸ.ನಂಬ್ರ 71/3 ರಲ್ಲಿ 0.31 ಎಕ್ರೆ ಜಮೀನನ್ನು ಕೈಗಾರಿಕಾ (ಐಸ್‌ಪ್ಲ್ಯಾಂಟ್) ರಚಿಸುವ ಉದ್ದೇಶಕ್ಕೆ ಮಾತ್ರ ಉಪಯೋಗಿಸಲು ಕೃಷಿಯೇತರ ಅನುಮತಿಯನ್ನು ನೀಡಿರುವುದು ಕಂಡು ಬರುತ್ತದೆ.

(2) ಪ್ರಶ್ನಿತ ಆದೇಶದ ಪ್ರತಿಯನ್ನು ಪರಿಶೀಲಿಸಲಾಯಿತು. ಮೇಲ್ಮನವಿದಾರರು ಮೇಲಿನಂತೆ ಕೈಗಾರಿಕಾ (ಐಸ್ ಪ್ಲ್ಯಾಂಟ್) ರಚಿಸುವ ಉದ್ದೇಶಕ್ಕೆ ಅನುಮತಿ ಪಡೆದ ಜಮೀನಿನಲ್ಲಿ ಐಸ್‌ಪ್ಲ್ಯಾಂಟ್ ರಚನೆ ಮಾಡದೇ ಫಿಶ್ ಪೌಡರ್ ಘಟಕವನ್ನು ಸ್ಥಾಪಿಸಿ ಯಂತ್ರೋಪಕರಣಗಳನ್ನು ಅಳವಡಿಸಿದ್ದು, ಈ ಫಿಶ್‌ಪೌಡರ್ ಘಟಕದಿಂದ ಗ್ರಾಮದ ಸಾರ್ವಜನಿಕರಿಗೆ ಹಾಗೂ ಶಾಲಾ ಮಕ್ಕಳಿಗೆ ತೊಂದರೆ ಆಗುತ್ತಿದ್ದು, ಈ ಕಾನೂನು ಬಾಹಿರ ಘಟಕವನ್ನು ಸ್ಥಗಿತಗೊಳಿಸಬೇಕು ಎಂದು ಸಾರ್ವಜನಿಕರು ಹಲವಾರು ಬಾರಿ ಮನವಿ ಸಲ್ಲಿಸಿರುತ್ತಾರೆ. ಅಲ್ಲದೇ ಸಾರ್ವಜನಿಕರು ಸಿವಿಲ್ ನ್ಯಾಯಾಲಯದಲ್ಲಿ ಒಎಸ್ ನಂಬ್ರ 350/2015 ರಂತೆ ದಾವೆಯನ್ನೂ ಕೂಡಾ ದಾಖಲಿಸಿರುತ್ತಾರೆ. ಈ ಪ್ರಕರಣದಲ್ಲಿ ತಹಶೀಲ್ದಾರ ಬ್ರಹ್ಮಾವರ ಇವರನ್ನು ಕೂಡಾ ಪ್ರತಿವಾದಿಯನ್ನಾಗಿ ಮಾಡಿರುತ್ತಾರೆ. ಅಲ್ಲದೇ ಈ ಫಿಶ್ ಪೌಡರ್ ಘಟಕನ್ನು ಸ್ಥಗಿತಗೊಳಿಸಿ, ವಿಚಾರಣಾಧೀನ ಜಮೀನಿಗೆ ನೀಡಿರುವ ಭೂ ಪರಿವರ್ತನೆ ಅನುಮತಿಯನ್ನು ರದ್ದುಪಡಿಸಲು ಸಾರ್ವಜನಿಕರು ಅನಿರ್ಧಿಷ್ಟಾವಧಿ ಮುಷ್ಕರ ನಡೆಸುವುದಾಗಿ ತಿಳಿಸಿದ್ದರಿಂದ ಈ ಬಗ್ಗೆ ಮೇಲ್ಮನವಿದಾರರಿಗೆ ಸೂಕ್ತ ನೋಟೀಸು ಜ್ಯಾರಿ ಮಾಡಿ ಅವರಿಂದ ಉತ್ತರವನ್ನು ಪಡೆಯಲಾಗಿದೆ. ಅವರು ನೀಡಿದ ಉತ್ತರದಲ್ಲಿ ತಾವು ಫಿಶ್ ಪೌಡರ್ ಘಟಕವನ್ನು ಸ್ಥಾಪಿಸಿದ್ದು ನಿಜವೆಂದು ಒಪ್ಪಿಗೆ ಕೊಂಡಿರುತ್ತಾರೆ. ಅಲ್ಲದೇ ದಿನಾಂಕ 18-01-2017 ರಿಂದ ಐರೋಡಿ ಗ್ರಾಮ ಪಂಚಾಯತಿ ಎದುರು ಸಾರ್ವಜನಿಕರು ಅನಿರ್ಧಿಷ್ಟಾವಧಿ ಮುಷ್ಕರ ಆರಂಭಿಸಿದ್ದರಿಂದ ಸಹಾಯಕ ಕಮೀಷನರ್ ಕುಂದಾಪುರ ಇವರು ಸದ್ರಿ ಫಿಶ್ ಪೌಡರ್ ಘಟಕದ ಕೆಲಸವನ್ನು ಸ್ಥಗಿತಗೊಳಿಸುವಂತೆ ಶರ್ತಬದ್ಧ ಆದೇಶವನ್ನು ಹೊರಡಿಸಿರುತ್ತಾರೆ. ಆದ್ದರಿಂದ ಮೇಲ್ಮನವಿದಾರರು ವಿಚಾರಣಾಧೀನ ಜಮೀನಿನಲ್ಲಿ ಕೈಗಾರಿಕಾ (ಐಸ್ ಪ್ಲ್ಯಾಂಟ್) ರಚಿಸುವ ಉದ್ದೇಶಕ್ಕೆ ಕೃಷಿಯೇತರ ಅನುಮತಿಯನ್ನು ಪಡೆದು ಭೂ ಪರಿವರ್ತನಾ ಆದೇಶದ ಉದ್ದೇಶ ಹಾಗೂ ಶರ್ತುಗಳನ್ನು ಉಲ್ಲಂಘಿಸಿದ್ದು ಸ್ಪಷ್ಟವಾಗಿದ್ದರಿಂದ ವಿಚಾರಣಾಧೀನ ಜಮೀನಿಗೆ ನೀಡಿದ ಕೃಷಿಯೇತರ ಅನುಮತಿಯನ್ನು ರದ್ದುಪಡಿಸಿರುವುದು ಕಂಡು ಬರುತ್ತದೆ.

(3) ಮೇಲ್ಮನವಿದಾರರು ಸ.ನಂಬ್ರ 71/3 ರಲ್ಲಿ 0.31 ಎಕ್ರೆ ಜಮೀನಿನಲ್ಲಿ ಕೈಗಾರಿಕಾ (ಐಸ್ ಪ್ಲ್ಯಾಂಟ್) ರಚಿಸುವ ಉದ್ದೇಶಕ್ಕೆ ಕೃಷಿಯೇತರ ಅನುಮತಿಯನ್ನು ಪಡೆದು ಸದ್ರಿ ಜಮೀನನ್ನು ಫಿಶ್ ಪೌಡರ್ ಘಟಕ ಸ್ಥಾಪಿಸಿದ್ದರಿಂದ ಭೂ ಪರಿವರ್ತನೆ ಆದೇಶದ ಶರ್ತು ಉಲ್ಲಂಘನೆ ಆಗಿರುವುದರಿಂದ ಪ್ರಶ್ನಿತ ಮಂಜೂರಾತಿ ಆದೇಶ ರದ್ದುಪಡಿಸಿದ ಆದೇಶ ಸಮಂಜಸವಾಗಿದೆ.

ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಆದೇಶ-

-: ಆದೇಶ :-

ಮೇಲ್ಮನವಿಯನ್ನು ವಜಾಗೊಳಿಸಿದೆ.

ಈ ಆದೇಶವನ್ನು ದಿನಾಂಕ 24.9.18 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

(ಸಹಿ)

ಸಹಾಯಕ ಕಮೀಷನರ್,
ಕುಂದಾಪುರ.

|| ಯಥಾ ಪ್ರತಿ ||

Asst. Commissioner Kundapura ... Kundapura, Udupi Dist.

ಪ್ರತಿ:- ತಹಶೀಲ್ದಾರರು ಬ್ರಹ್ಮಾವರ ತಾಲ್ಲೂಕು ಬ್ರಹ್ಮಾವರ ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ಮಾಹಿತಿ ಹಕ್ಕು ಪ್ರತಿ

(ಸಹಿ)
ಅಧೀಕ್ಷಕರು
ಜಿಲ್ಲಾಧಿಕಾರಿಯವರ ಕಛೇರಿ
ಉಡುಪಿ ಜಿಲೆ. ಉಡುಪಿ.

(ಸಹಿ)
ತಹಶೀಲ್ದಾರ್ ...
ಸಹಾಯಕ ...
ಕುಂದಾಪುರ, ಉಡುಪಿ ಜಿಲ್ಲೆ

Annex - X [English Translation] 92

In the Court of the Assistant Commissioner, Kundapura Sub-Division, Kundapura

No. CDS RD0050000183340/R.A 228/2018 Dated: 24-09-2018

Present: T. Boopalan, IAS
Sub-divisional Officer,
Kundapura Sub-Division, Kundapura

| Appellants | | Respondents |
|---|---|---|
| Uma Devi<br>D/o Nagaveni<br>Balkudru Grama, Brahmavara Taluk<br>(Advocate: T.B. Shetty,<br>Kundapura) | AND | Tahslidar<br>Brahmavara Taluk |

The appellants herein have challenged the order No. ALN SRR 238/2016-17 dated 01-02-2017 issued by the Respondent under the Karnataka Land Revenue Act 1964 Sec. 136(2). (hereafter referred to as the challenged order). This appeal includes the land at Brahmavara Taluk, Balkudru grama, Sy. No. 71/3, 0.31 acres (hereinafter referred to as disputed land). Notice has been issue to both the parties as per law.

The appellants are appealing on the following grounds,

1. The Respondent herein, upon the request of the Appellant issued an order no. BDS ALN SR 329/2012-14 dated 01-02-2014 with respect to Sy. No. 71/3, 0.31 acres giving permission for the land to be used for industrial purpose having mentioned specifically in brackets for the purpose of "ice plant" . As per Karnataka Land Revenue Rules any agricultural land in order to be used for non agricultural purpose requires to be converted after following the procedures. After which the land must be used for the purpose for which it is converted only, If not , it results in the violation of the said rules. The decision to run any kind of industry in the converted land is the right of the owner. Therefore, the Appellant's decision to run a fish powder unit in the said land is not in violation of any laws.

2. The reason as to why the conversion should not be cancelled has been submitted by the appellants through their counsel. Yet it was found that the said conversion order was cancelled by the Respondent.

According to Karnataka Land Revenue Act 1964 Sec. 95(2) grants power to the respondent to deal with the conversion of agricultural land and not to decide the kind of activity on a converted land. Therefore it is prayed the said appeal be accepted and the challenged order be cancelled.

Arguments on behalf of the Appellants has been heard and the available documents have been perused.

The issue at hand is;

Whether the Order of the Respondent is proper?

Ans: Yes

Reasons:

93

1. The available documents have been perused. The Respondent herein, issued an order no. BDS ALN SR 329/2012-14 dated 01-02-2014 with respect to Sy. No. 71/3, 0.31 acres giving permission for the land to be used for industrial purpose of establishing an "ice plant" only.

2. The said order has been perused. It is found that though the disputed land was converted for the purpose of establishment of an ice plant, the appellants herein used it for the purpose of fish powder unit and installed the machineries for the same. The said units are causing a lot of difficulties for the residents as well the school children. Several complaints have been filed regarding the same. Also a civil suit- O.S. No. 350/2015 has been filed in the court regarding the same. The Tahsildar was a Respondent in the said suit as well. The villagers also decided to go on a strike against the said unit. A notice of the same was sent to the appellant and answer was received from them admitting them they indeed were running a fish powder unit in the disputed land. Due to the on 18-01-2017 before Irody grama Panchayath, the Assistant Commissioner, Kundapura issued a stay order to stop the functioning of the unit. That since the conversion order has been clearly violated by the Appellants, the same has been cancelled.

3. Since a conversion order was issued for Sy. No. 71/3, 0.31 acres giving permission for the land to be used for industrial purpose of establishing an "ice plant" only but the Appellants have violated the same using the same for the purpose of establishment of a fish powder unit. Therefore, the said challenged order is proper and valid.

Order

The appeal has been dismissed.

This order has been pronounced in the open court on 24-09-2018

Assistant Commissioner,
Kundapura

Copy to:
Tahsildar, Brahmavara Taluk, Brahmavara

ANNEX-Y

94

ಕಂದಾಯ ಇಲಾಖೆ ಕರ್ನಾಟಕ ಸರ್ಕಾರ

ತಹಶೀಲ್ದಾರರ ಕಛೇರಿ, ಬ್ರಹ್ಮಾವರ ತಾಲೂಕು ಉಡುಪಿ ಜಿಲ್ಲೆ, 576213

Office : 0820 -2560494 (O), 2560494( F), E-Mail:thasildarbrahmavara@gmail.com

ಎನ್‌ಸಿಆರ್/ ಸಿಆರ್/ 64/17-18

ದಿನಾಂಕ 30/3/2019

ತಹಶೀಲ್ದಾರರು ಬ್ರಹ್ಮಾವರ ಇವರ ಸಮಕ್ಷಮದಲ್ಲಿ

ಉಪಸ್ಥಿತರು: ತಹಶೀಲ್ದಾರರು
ಬ್ರಹ್ಮಾವರ

ಇವರೊಂದಿಗೆ

| ದೂರುದಾರರು | ಎದುರುದಾರರು |
|---|---|
| 1) ಶ್ರೀ ಥೋಮಸ್ ರೋಡ್ರಿಗಸ್<br>ಬಿನ್; ಪೌಲ್ ರೋಡ್ರಿಗಸ್<br>ಬಾಳ್ಕುದ್ರು ಗ್ರಾಮ<br>2) ಶ್ರೀಮತಿ ಇಂದಿರಾ<br>ಗ್ರಾಮ ಪಂಚಾಯತ್ ಸದಸ್ಯರು<br>ಐರೋಡಿ ಗ್ರಾಮ ಪಂಚಾಯತ್<br>3) ಬೇಬಿ ಉಪಾಧ್ಯಕ್ಷರು<br>ಐರೋಡಿ ಗ್ರಾಮ ಪಂಚಾಯತ್<br>4) ಸುರೇಶ್ ಅಡಿಗ<br>ಅಧ್ಯಕ್ಷರು ಬಾಳ್ಕುದ್ರು ಹೋರಾಟ ಸಮಿತಿ<br>5) ರವೀಂದ್ರ ಸುವರ್ಣ<br>ಬಾಳ್ಕುದ್ರು ಶಾಲಾ ಸಮಿತಿ<br>ಬಾಳ್ಕುದ್ರು ಗ್ರಾಮ | 1) ಶ್ರೀಮತಿ ಉಮಾದೇವಿ<br>ಕೋಂ; ಕೇಶವ ಕುಂದರ್<br>ಪಾಂಡೇಶ್ವರ ಗ್ರಾಮ<br>ಬ್ರಹ್ಮಾವರ ತಾಲೂಕು<br><br>2) ಬಂದರು ಅಧಿಕಾರಿಯವರು<br>ಬಂದರು ಮತ್ತು ಒಳನಾಡು ಸಾರಿಗೆ<br>ಇಲಾಖೆ ಹಂಗಾರಕಟ್ಟೆ<br>ಬ್ರಹ್ಮಾವರ ತಾಲೂಕು |

ಪ್ರಸ್ತಾವನೆ:

ಬ್ರಹ್ಮಾವರ ತಾಲೂಕು ಬಾಳ್ಕುದ್ರು ಗ್ರಾಮದ ಸ.ನಂ; 72/22ಬಿ ರಲ್ಲಿ 0.03 ಎಕ್ರೆ ಹಾಗೂ ಸ.ನಂ; 72/21ಬಿ ರಲ್ಲಿ 0.02 ಎಕ್ರೆ ಸರ್ಕಾರಿ ಜಮೀನನ್ನು ಒಂದನೆ ಎದುರುದಾರರು ಅತಿಕ್ರಮಿಸಿಕೊಂಡು ಈ ಜಮೀನಿಗೆ ಕಂಪೌಂಡ್ ಗೋಡೆ ನಿರ್ಮಿಸಿದ್ದು, ಈ ಅತಿಕ್ರಮಣವನ್ನು ತೆರವುಗೊಳಿಸಿ ಅತಿಕ್ರಮಣದಾರರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ದೂರುದಾರರು ಈ ಕಛೇರಿಗೆ ಜಂಟಿಯಾಗಿ ದೂರು ಅರ್ಜಿ ನೀಡಿರುವುದಾಗಿದೆ. ಈ ಕುರಿತು ತರಿಸಲಾದ ತನಿಖಾ ವರದಿ ಹಾಗೂ ಮೋಜಣಿ ನಕಾಶೆಯನ್ನು ಪರಿಶೀಲಿಸಲಾಗಿ , ಒಂದನೆ ಎದುರುದಾರರು ಸರಕಾರಿ ಜಮೀನನ್ನು ಅತಿಕ್ರಮಣ ಮಾಡಿಕೊಂಡಿರುವುದು ನಿಜವೆಂದು ಕಂಡು ಬಂದಿರುತ್ತದೆ. ಅಲ್ಲದೆ ಎದುರುದಾರರು ತನಿಖಾ ಸಮಯದಲ್ಲಿ ತಾವು ಅತಿಕ್ರಮಿಸಿಕೊಂಡಿರುವ ಸರಕಾರಿ ಜಮೀನು ಬಂದರು ಇಲಾಖೆಗೆ ಸಂಬಂಧಿಸಿದ ಜಮೀನಾಗಿದ್ದು, ಈ ಜಮೀನಿನ ಸ್ವಾಧೀನತೆ ಬಗ್ಗೆ ಬಂದರು ಇಲಾಖೆಗೆ ಬಾಡಿಗೆ ನೀಡುತ್ತಿರುವುದಾಗಿ ತಿಳಿಸಿದ ಮೇರೆಗೆ, ಈ ಪ್ರಕರಣದಲ್ಲಿ ಸಂಬಂಧಿಸಿದ ಎಲ್ಲರನ್ನೂ ವಿಚಾರಣೆ ನಡೆಸಿ ವಿಷಯದ ಸತ್ಯಾಸತ್ಯತೆ ತಿಳಿದುಕೊಳ್ಳುವುದು ಸೂಕ್ತವೆಂದು ತೀರ್ಮಾನಿಸಿ ವಿಚಾರಣೆಗಾಗಿ 21/7/2018 ರಂದು ದಿನಾಂಕ ನಿಗದಿ ಪಡಿಸಿ, ಸದ್ರಿ ದಿನಾಂಕದಂದು ಈ ಕಛೇರಿಯಲ್ಲಿ ವಿಚಾರಣೆಗಾಗಿ ಹಾಜರಾಗಬೇಕೆಂದು ದೂರುದಾರರು ಹಾಗೂ ಎದುರುದಾರರಿಗೆ ಉಚಿತ ನೋಟಿಸು ಜ್ಯಾರಿ ಮಾಡಲಾಯಿತು.

ದಿನಾಂಕ 21/7/2018 ರಂದು ವಿಚಾರಣೆಗೆ ದೂರುದಾರರು ತಮ್ಮ ನ್ಯಾಯವಾದಿಯವರೊಂದಿಗೆ ಹಾಜರಾಗಿದ್ದು ಹಾಗೂ 1 ನೇ ಎದುರಿಯವರ ಪರ ಅವರ ಪತಿ ಹಾಗೂ 2 ನೇ ಎದುರುದಾರರು ಖುದ್ದು ಹಾಜರಿದ್ದು ಎರಡನೆ ಎದುರುದಾರರಾದ ಬಂದರು ಇಲಾಖಾ ಅಧಿಕಾರಿಯವರು ದೂರಿಗೆ ಸಂಬಂಧಿಸಿದ ಜಮೀನು ತಮ್ಮ ಬಂದರು ಇಲಾಖೆಗೆ ಸಂಬಂಧಿಸಿದ ಜಮೀನಾಗಿರುವುದಾಗಿ ಸರಕಾರದ ಆದೇಶಗಳ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಅಲ್ಲದೆ ದೂರಿಗೆ ಸಂಬಂಧಿಸಿದ ಜಮೀನುಗಳನ್ನು ಬಂದರು ಇಲಾಖೆಯಿಂದ ಸರಕಾರದ ಆದಾಯದ ಹಿತದೃಷ್ಟಿಯಿಂದ ಈಶ್ವರಿ.ಕೆ.ಪಣಿಕ್ಕರ್ ಮೆ॥ ಇಂಡ್ ಕ್ರಾಫ್ಟ್ ಕಂಪೌಂಡ್ ಎಂ ಜಿ ರೋಡ್ ನಲಂಚಿರಾ ತ್ರಿವೇಂಡ್ರಮ್ ಕೇರಳ ಇವರಿಗೆ ನೆಲ ಬಾಡಿಗೆ ಆಧಾರದ ಮೇಲೆ ನೀಡಿರುವುದಾಗಿ ಪತ್ರ ನೀಡಿರುತ್ತಾರೆ.

ತನಿಖೆ ಸಮಯದಲ್ಲಿ 1 ನೇ ಎದುರುದಾರರ ಪತಿ ಶ್ರೀ ಕೇಶವ ಕುಂದರ್ ರವರು ಈ ಜಮೀನಿಗೆ ತಾವು ನೆಲ ಬಾಡಿಗೆ ಪಾವತಿಸುತ್ತಿರುವ ಬಗ್ಗೆ ರಶೀದಿ ಪ್ರತಿಗಳನ್ನು ಹಾಜರು ಪಡಿಸಿರುತ್ತಾರೆ ಪ್ರಕರಣವನ್ನು ದಿನಾಂಕ 4/8/2018 ಕ್ಕೆ ಮುಂದುವರಿಸಲಾಯಿತು. ದಿನಾಂಕ 4/8/2018 ರಂದು ಅನಿವಾರ್ಯ ಕಾರಣಗಳಿಂದ ಪ್ರಕರಣದ ವಿಚಾರಣೆ ನಡೆಯದೆ

ಆರ್.ಟಿ.ಐ./ಸಿಆರ್/ 392/2019

ಮಾಹಿತಿ ಹಕ್ಕು ಪ್ರತಿ

[signature]

ಅಧೀಕ್ಷಕರು
ಜಿಲ್ಲಾಧಿಕಾರಿಯವರ ಕಛೇರಿ
ಉಡುಪಿ ಜಿಲ್ಲೆ, ಉಡುಪಿ.

95

ದಿನಾಂಕ 18/8/2018 ಕ್ಕೆ ಮುಂದುವರಿಸಲಾಯಿತು ದಿನಾಂಕ 18/8/2018 ರಂದು ಪ್ರಕರಣವನ್ನು ವಿಚಾರಣೆ ತೆಗೆದುಕೊಂಡು ದಿನಾಂಕ 4/9/2018 ಕ್ಕೆ ಪ್ರಕರಣವನ್ನು ಮುಂದುವರಿಸಲಾಯಿತು ಹೀಗೆಯೇ ಬೇರೆ ಬೇರೆ ದಿನಾಂಕಗಳಂದು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡು ಥೋಮಸ್ ರೊಡ್ರಿಗಸ್, ಇಂದಿರಾ, ಬೇಬಿ, ಸುಕೇಶ ಅಧಿಗ ರವೀಂದ್ರ ಸುವರ್ಣ ರವರು ಜಂಟಿಯಾಗಿ ತಮ್ಮ ನ್ಯಾಯವಾದಿಯರ ಮೂಲಕ ಸಲ್ಲಿಸಿದ ಲಿಖಿತ ಆಕ್ಷೇಪಣೆ ಹಾಗೂ ಲಿಖಿತ ವಾದದ ಸಾರಾಂಶ ಹಾಗೂ 1ನೇ & 2ನೇ ಎದುರುದಾರರು ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ಪ್ರಕರಣವನ್ನು ದಿನಾಂಕ 20/2/2019 ರಂದು ಆದೇಶಕ್ಕಾಗಿ ಕಾಯ್ದಿರಿಸಲಾಯಿತು.

ಪ್ರಕರಣಕ್ಕೆ ಸಂಬಂಧಿಸಿದ ದೂರುದಾರರ ಲಿಖಿತ ಆಕ್ಷೇಪಣೆ ಮತ್ತು ಲಿಖಿತ ವಾದವನ್ನು ಪರಿಶೀಲಿಸಲಾಗಿ ಈ ಪ್ರಕರಣದ 1 ನೇ ಪ್ರತಿವಾದಿಯವರು ಲಿಖಿತ ನೋಟೀಸು ಸ್ವೀಕರಿಸಿದ್ದರೂ ಕೂಡಾ ಪ್ರಕರಣದ ವಿಚಾರಣೆಗೆ ಖುದ್ದಾಗಿ ಹಾಜರಾಗಿರುವುದಿಲ್ಲ. ಹಾಗೂ ಈ ಬಗ್ಗೆ ಯಾರಿಗೂ ಅಧಿಕಾರ ಪತ್ರ ನೀಡಿರುವುದಿಲ್ಲ ಹೀಗಿರುವಾಗ ಕೇಶವ ಕುಂದರ್ ರವರು ಯಾವುದೇ ಅಧಿಕಾರ ಪತ್ರ ಹೊಂದಿರದೆ ಈ ಪ್ರಾಧಿಕಾರದಲ್ಲಿ ನೀಡುವ ಹೇಳಿಕೆಯನ್ನು ಮಾನ್ಯ ಮಾಡಲು ಸಾಧ್ಯವಿರುವುದಿಲ್ಲ ಎಂಬುದಾಗಿ ತಿಳಿಸಿರುವುದನ್ನು ಪರಿಶೀಲಿಸಲಾಗಿದೆ. ಈ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾದ ಬಂದರು ಅಧಿಕಾರಿಯವರು ವಿಚಾರಣಾ ಸಮಯದಲ್ಲಿ ವಿಭಿನ್ನ ಹೇಳಿಕೆ ನೀಡಿರುವುದಲ್ಲದೆ ಸರಕಾರಿ ಜಮೀನನ್ನು ಕೇಶವ ಕುಂದರ್ ರವರಿಗೆ ವಿವಿಧ ಮೀನುಗಾರಿಕಾ ಉದ್ದೇಶಕ್ಕಾಗಿ ಸರಕಾರಿ ಜಮೀನು ಮಂಜೂರು ಮಾಡಿರುವ ಬಗ್ಗೆ ದಿನಾಂಕ 5/12/2018 ರ ಆದೇಶದ ಪ್ರತಿ ಹಾಜರು ಪಡಿಸಿದ್ದು ಮಾನ್ಯ ತಹಶೀಲ್ದಾರರ ಸಮಕ್ಷಮ ಪ್ರಕರಣ ವಿಚಾರಣೆಯಲ್ಲಿ ಇರುವಾಗಲೇ ವಿವಾದಿತ ಸ್ಥಳವನ್ನು ಖಾಸಗಿ ವ್ಯಕ್ತಿಗೆ ಮಂಜೂರು ಮಾಡಿದ್ದು ಕಾನೂನು ಬಾಹಿರ ಕೃತ್ಯವಾಗಿದೆ. ಎಂಬುದಾಗಿ ಲಿಖಿತ ವಾದದಲ್ಲಿ ತಿಳಿಸಿರುತ್ತಾರೆ 1ನೇ ಪ್ರತಿ ವಾದಿಯವರು ಯಾವುದೇ ಪ್ರಾಧಿಕಾರದ ಅನುಮತಿ ಪಡೆಯದೆ, ಅಧಿಕಾರ ಹೊಂದದೆ ಅಕ್ರಮವಾಗಿ ಕಂಪೌಂಡ್ ವಾಲ್ ಹಾಗೂ ಶೆಡ್ ನಿರ್ಮಿಸಿ ಕಾನೂನು ವ್ಯಾಪ್ತಿ ಮೀರಿ ಅಕ್ರಮವಾಗಿ ವ್ಯವಹರಿಸಿರುತ್ತಾರೆ ಎಂಬುದಾಗಿ ಲಿಖಿತ ವಾದದಲ್ಲಿ ದೂರಲಾಗಿದೆ ಹಾಗೂ ತಾವು ಸಲ್ಲಿಸಿದ ಲಿಖಿತ ಹೇಳಿಕೆ ವಿಚಾರವನ್ನು ಆರ್ಡರ್ ಶೀಟಿನಲ್ಲಿ ನಮೂದಿಸದೆ ಇರುವುದನ್ನು ಕೂಡಾ ಲಿಖಿತ ವಾದದಲ್ಲಿ ಆಕ್ಷೇಪಿಸಿರುವುದನ್ನು ಗಮನಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ 1ನೇ ಪ್ರತಿವಾದಿ ಕಡೆಯಿಂದ ಯಾವುದೇ ಲಿಖಿತ ಹೇಳಿಕೆ ದಾಖಲು ಮಾಡಿರುವುದಿಲ್ಲ ಆದರೆ ಈ ಪ್ರಕರಣಕ್ಕೆ ಸಂಬಂಧಿಸಿದ 2 ನೇ ಪ್ರತಿವಾದಿಯವರು ವಿಚಾರಣೆಗೆ ಖುದ್ದು ಹಾಜರಿದ್ದು, ಬಾಳ್ಕುದ್ರು ಗ್ರಾಮದ ಸ.ನಂ; 72/22 ಎ ರಲ್ಲಿ 0.03 ಎಕ್ರೆ ಹಾಗೂ ಸ. ನಂ; 72/21 ಎ ರಲ್ಲಿ 0.02 ಎಕ್ರೆ ಜಮೀನುಗಳು ಬಂದರು ಇಲಾಖೆಗೆ ಸಂಬಂಧಿಸಿದ ಜಮೀನುಗಳಾಗಿರುವುದಾಗಿ ಸರಕಾರದ ದಾಖಲೆಗಳ ಪ್ರತಿಗಳನ್ನು ಹಾಜರು ಪಡಿಸಿರುತ್ತಾರೆ ಹಾಗೂ ಸರಕಾರದ ಆದಾಯದ ಹಿತದೃಷ್ಟಿಯಿಂದ ಪ್ರಸ್ತಾವಿತ ಜಮೀನುಗಳನ್ನು ಶ್ರೀ ಈಶ್ವರಿ.ಕೆ ಪಣಿಕ್ಕರ್ ಮೇ॥ ಇಂಡ್ ಪ್ರಾಪ್ಟ್ ಮೆಟಲ್ಸ್ , ಕಂಪೌಂಡ್ ಎಂ ಸಿ ರೋಡ್ ನಲಂಚಿರಾ ತ್ರಿವೇಂಡ್ರಮ್ ಕೇರಳ ಇವರಿಗೆ 200 ಚ. ಮೀಟರ್ ಸ್ಥಳವನ್ನು ತಾತ್ಕಾಲಿಕ ನೆಲಬಾಡಿಗೆ ಆಧಾರದ ಮೇಲೆ ನೀಡಲಾಗಿದೆ. ಈಗ ಈ ನೆಲಬಾಡಿಗೆಯನ್ನು ರದ್ದು ಪಡಿಸಿ 148 ಚ. ಅಡಿ ಜಮೀನಿಗೆ ಕೇಶವ ಕುಂದರ್ ರವರ ಹೆಸರಿಗೆ ತಾತ್ಕಾಲಿಕ ನೆಲ ಬಾಡಿಗೆ ಮಂಜೂರು ಮಾಡಿರುವುದಾಗಿ ತಿಳಿದು ಬರುತ್ತದೆ.

ಪ್ರಕರಣಕ್ಕೆ ಸಂಬಂಧಿಸಿದ ಕಂದಾಯ ದಾಖಲೆಗಳಾದ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಲಾಗಿ ಪಹಣಿ ಪತ್ರಿಕೆಗಳ ಕಲಂ 9 ರಲ್ಲಿ ಸರಕಾರ ಎಂಬುದಾಗಿ ನಮೂದು ಇರುತ್ತದೆ. ಬಂದರು ಇಲಾಖೆಯವರು ಹಾಜರು ಪಡಿಸಿದ ದಾಖಲೆಗಳಂತೆ ಪ್ರಸ್ತಾವಿತ ಜಮೀನುಗಳು ಬಂದರು ಇಲಾಖೆಗೆ ಸಂಬಂಧಿಸಿದ ಜಮೀನುಗಳಾಗಿದ್ದು ಬಂದರು ಇಲಾಖೆ ಇದುವರೆಗೆ ಪಹಣಿಗಳಲ್ಲಿ ಖಾತೆಯನ್ನು ಬಂದರು ಇಲಾಖಾ ಹೆಸರಿಗೆ ವರ್ಗಾಯಿಸಿಕೊಂಡಿರುವುದು ಕಂಡು ಬರುವುದಿಲ್ಲ ಮತ್ತು ವಿವಾದಿತ ಜಮೀನುಗಳು ಬಂದರು ಇಲಾಖೆಗೆ ಸಂಬಂಧಿಸಿದ ಜಮೀನುಗಳಾಗಿರುವುದಾಗಿ ದಾಖಲೆಗಳಿಂದ ತಿಳಿದು ಬರುವುದರಿಂದ ಈ ಜಮೀನುಗಳ ವಿಲೇವಾರಿ ಮೇಲೆ ಬಂದರು ಇಲಾಖೆ ಪೂರ್ಣ ಅಧಿಕಾರ ಹೊಂದಿರುವುದರಿಂದ ಈ ವಿಚಾರದಲ್ಲಿ ಕಂದಾಯ ಇಲಾಖಾ ವತಿಯಿಂದ ಯಾವುದೇ ಕ್ರಮ ತೆಗೆದುಕೊಳ್ಳಲು ಅವಕಾಶ ಇರುವುದಿಲ್ಲ.

ಆದುದರಿಂದ ಈ ಪ್ರಕರಣದಲ್ಲಿ ದೂರುದಾರರು ಹಾಗೂ ಎದುರುದಾರರು ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಬಾಳ್ಕುದ್ರು ಗ್ರಾಮದ ಸ.ನಂ; 72/22 ಎ ರಲ್ಲಿ 0.03 ಎಕ್ರೆ ಹಾಗೂ ಸ.ನಂ; 72/21 ಎ ರಲ್ಲಿ 0.02 ಎಕ್ರೆ ಸರ್ಕಾರಿ ಜಮೀನು ಬಂದರು ಇಲಾಖೆಗೆ ಸಂಬಂಧಿಸಿದ ಜಮೀನು ಎಂಬುದಾಗಿ ದೃಢಪಟ್ಟಿರುವುದರಿಂದ ಸರಕಾರಿ ಜಮೀನಿನ ಅಕ್ರಮಣ ಎಂಬುದಾಗಿ ದೂರುದಾರರು ನೀಡಿದ ದೂರು ಅರ್ಜಿಯನ್ನು ಈ ಮೂಲಕ ವಜಾಗೊಳಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ 26/3/2019 ರಂದು ಬಹಿರಂಗವಾಗಿ ಓದಿ ಹೇಳಲಾಯಿತು

ತಹಶೀಲ್ದಾರರ ಕಾರ್ಯಾಲಯ OFFICE OF THE TAHSILDAR

(ಸಹಿ)
ತಹಶೀಲ್ದಾರರು ಬ್ರಹ್ಮಾವರ
ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ

Received on.
04-05-2019
ಆರ್.ಟಿ.ಐ.ಸಿಆರ್/332/2019
ಮಾಹಿತಿ ಹಕ್ಕು

(ಸಹಿ)
ಅಧೀಕ್ಷಕರು
ಜಿಲ್ಲಾಧಿಕಾರಿಯವರ ಕಛೇರಿ
ಉಡುಪಿ ಜಿಲ್ಲೆ, ಉಡುಪಿ

Annex-Y [English Translation]

96

Revenue Department Karnataka Government
Office of the Tahsildar, Brahmavara Taluk, Udupi District-576213
Office:0820-2560494(O), 2560494(F) Email:thasildarbrahmavara@gmail.com

NCR/CR/64/17-18 Dated: 30-03-2019

Court of the Tahsildar, Brahamavara

Present: Tahsildar,
Brahamavara

Between:

Petitioners
1. Shri Thomas Rodriguez
S/o Paul Rodriguez
Balkudru grama

2. Smt. Indira
Member of the Grama Panchayath
Irody Grama Panchayath

3. Baby, Vice President,
Irody Grama Panchayath

4. Suresh Adiga
President, Balkudru Development Committee

5. Ravindra Suvrana
Balkudru School Committee
Balkudru Grama

Respondents
1. Smt. Uma Devi
W/o Keshava Kundar
Pandeshwara Grama
Brahmavra Taluk

2. Port Authorities
Port and Inland
Transport Department
Hangarakatte,
Brahmavara Taluk

Proposal:
0.03 acres of Sy. No. 72/22 and 0.02 acres of Sy.No. 72/21A at Brahamavara Taluk, Balkudru Grama belongs to the government and has been illegally occupied by the Respondent No.1 and a compound wall has been built around the said area. The petitioners herein have jointly come before this court praying that the said the occupancy be removed and suitable action be taken against the said Respondent. The reports and the map of the said land have been perused. Upon doing so it has been found that the Respondent No. 1 has illegally occupied a government land and since the land belongs to the port authority the rent for the same is also being paid to the department. Therefore in order to find out the truth, the parties have been issued a notice to be present before this court on 21-07-2018.
On 21-07-2018 the Petitioners were present along with their counsel. The husband Respondent No.1 was present on behalf of her and Respondent 2 was present and

97

also submits that the said land belongs to the Port department. With respect to the aforementioned, the said land has been given in the interest of the Port department to Sri. Ishwar K. Panniker, M/s Ind Craft Metalling, Compound, M.C. Road, Nalanchira, Trivandrum, Kerala.

During the time of investigation the husband of the Respondent No.1, Sri Keshava Kundar claimed that the Respondent No.2 has been receiving rent for the same and has produced receipts of the same. The next hearing has been posted on 04-08-2018. Due to unavoidable circumstances the hearing on 04-08-2018 was adjourned to 18-08-2018. The case went on from 18-08-2018, 04-09-2018 and consecutive dates. The petitioners jointly submitted their objections as well as arguments and verified the documents submitted by the Respondents 1 and 2. The case was further posted to 20-02-2019 for orders.

With respect to the present case, the Petitioners' written objections as well arguments have been perused and a written notice has been received by the respondent no.1 yet the party has neither made herself present before the court nor has given anybody else the letter of authorization to appear on behalf of herself. In the present situation, it is confirmed that Sri Keshava Kundar, not having received any letter of authorization, any statement made by him in court stands invalid.

In the present case, the Port authority has given a different statement and have presented before the Tahsildar, that the government land has been granted to Keshava Kundar for the purpose of using it for different fisheries activities on 05-12-2018. While the case was before the Tahsildar, the disputed land being granted to a private person is against the existing laws. The same has been mentioned in the written arguments.

The Respondent No.1 not having taken permission from the concerned authorities, without authority, have illegally constructed a compound wall as well as a shed have gone beyond the limits of law has been mentioned in the written copy of the complaint and the same has been mentioned and observed in the order sheet.

With respect to the present case the 1st respondent has not submitted any written statement. However, the 2nd respondent in this case, being present in person has submitted various government documents stating that the Sy.No.72/22 A- 0.03 acres and Sy No.72/21A -0.02 acres, Balkudru are lands that belong to the Port department and that the 200 square meteres of the said lands have been temporarily given for rent to Sri. Ishwar K. Panniker, M/s Ind Craft Metalling, Compound, M.C. Road, Nalanchira. Trivandrum, Kerala. However it is found that presently, this land rent has been cancelled and 148 Square meters of the land has been given to Sri Keshava Kundar temporarily for land rent.

With respect to the present case the documents of Revenue and pahani .have been verified and the pahani column mentions that these are government lands. According to the documents submitted by the Port department show that the lands belong to the Port Department but in the pahani khatha it is not mentioned that the said lands are transferred to the name of the Port Department and since the disputed lands have been found to belong to the Port authority through the documents and they are in full ownership of the same, the Revenue authority cannot take any action. Therefore, in the present case the documents submitted by

98

Order

On the basis of the facts and arguments in the present case, it is confirmed that the lands at Sy.No.72/22 A- 0.03 acres and Sy No.72/21A -0.02 acres, Balkudru grama are government lands belonging to the Port department and since they have been illegally occupied the petition herein has been dismissed.

This order has been pronounced in open court on 26-03-2019.

99

ANNEX- Z

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಯವರ ಕಾರ್ಯಾಲಯ, ರಜತಾದ್ರಿ, ಮಣಿಪಾಲ – 576 104, ಉಡುಪಿ ಜಿಲ್ಲೆ,

ದೂರವಾಣಿ:0820-2574925(ಕ), 2532700(ಮ), 0820- 2574926 (ಫ್ಯಾಕ್ಸ್),

ಇಮೈಲ್: dcudp@dataone.in. ವೆಬ್‌ಸೈಟ್ www.udupi.nic.in

ಸಂಖ್ಯೆ: ಆರ್‌ಎ‌ಪಿ. ಎಸ್‌ಆರ್. 67/2018 ದಿನಾಂಕ: 03/07/2019

ತಹಶೀಲ್ದಾರರು,

ಬ್ರಹ್ಮಾವರ ತಾಲೂಕು - ಇವರಿಗೆ.

ಮಾನ್ಯರೇ,

1959

ವಿಷಯ:- ಬ್ರಹ್ಮಾವರ ತಾಲೂಕು ಬಾಳ್ಕುದ್ರು ಗ್ರಾಮದ ಸ.ನಂ. 71/3 ರಲ್ಲಿ 0.31 ಎಕ್ರೆ ಜಮೀನಿನ ಸ್ಥಳ ತನಿಖೆ ಮಾಡಿ ವರದಿ ನೀಡುವ ಕುರಿತು.

-*******-

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ. ಉಮಾ ದೇವಿ, ಬಿನ್: ನಾಗವೇಣಿ, ಬಾಳ್ಕುದ್ರು ಗ್ರಾಮ, ಬ್ರಹ್ಮಾವರ ತಾಲೂಕು ಇವರು ಸಹಾಯಕ ಕಮೀಷನರು, ಕುಂದಾಪುರ ಇವರ ಆದೇಶ ಕ್ರಮಾಂಕ: ಸಿಡಿಸ್ ಆರ್‌ಡಿ 0050000163340/ಆರ್‌ಎ 228/2018 ದಿನಾಂಕ: 24/09/2018 ರ ಆದೇಶದ ವಿರುದ್ಧ ಈ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ನೈಜತೆಯನ್ನು ತಿಳಿದುಕೊಳ್ಳುವ ಸಲುವಾಗಿ ತಾವು ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿ ದಿನಾಂಕ: 15/07/2019 ರ ಒಳಗಾಗಿ ಛಾಯಾಚಿತ್ರದೊಂದಿಗೆ ತನಿಖಾ ವರದಿಯನ್ನು ನೀಡುವಂತೆ ತಿಳಿಸಿದೆ. ( ಮೂಲ ಕಡತದೊಂದಿಗೆ ಈ ಕಛೇರಿಯ ವಿಚಾರಣಾ ಕಡತವನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.)

(ಜಿ.ಅ.ಮೇ.)

ತಮ್ಮ ವಿಶ್ವಾಸಿ,

ಜಿಲ್ಲಾಧಿಕಾರಿಯವರ ಪರವಾಗಿ,

ಉಡುಪಿ ಜಿಲ್ಲೆ, ಉಡುಪಿ

ತಹಶೀಲ್ದಾರರ ಕಛೇರಿ
ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ
04 JUL 2019
OFFICE OF THE TAHSILDAR
BRAHMAVARA TALUK, UDUPI DIST.

ಆರ್.ಐ.ಎ./ಸಿಆರ್/1332/2019
ಮಾಹಿತಿ ಹಕ್ಕು ಪ್ರತಿ
ಅಧೀಕ್ಷಕರು
ಜಿಲ್ಲಾಧಿಕಾರಿಯವರ ಕಛೇರಿ
ಉಡುಪಿ ಜಿಲ್ಲೆ, ಉಡುಪಿ

Annex-2 [English Translation] 100

Office of the District Collector, Rajathradi, Manipal-576104, Udupi Zilla
Phone:0820-2574925(Ka), 2332700(Ma), 0820-2574926(Fax)
Email-dcup@dataone.in. website: www.udupi.nic.in

No.:RAP SR 67/2018 Dated:03-07-2019

To,
Tahsildar,
Brahamavara Taluk

Respected Sir,
Sub: Regarding the spot inspection to be conducted at 0.31 acres of Sy. No. 71/3, Brahamavara Taluk, Balkudru Grama and the report of the same.

********

It is brought to notice that with respect to the above matter, Smt . Uma Devi, D/o Nagaveni residing at Balkudru grama, Brahmavara Taluk has appealed before this court challenging the order of the Assistant Commisioner, Kundapura, No. CDS RD 0050000183340/RA/228/2018 dated 24-09-2018.

In connection to the case, in order to find out the truth, you are hereby asked to conduct a spot inspection of the place and submit a report along with photographs within 15-07-2019. (the original file as well this office's inquiry file have been attached.) (Ji. A. Mi.)

Yours' faithfully,
On behalf of District Collector
Udupi District, Udupi

ANNEX - AA

101

ಕರ್ನಾಟಕ ಸರ್ಕಾರ

ತಹಶೀಲ್ದಾರರ ಕಾರ್ಯಾಲಯ, ಬ್ರಹ್ಮಾವರ – 576 213, ಬ್ರಹ್ಮಾವರ ತಾಲ್ಲೂಕು ಮತ್ತು ಉಡುಪಿ ಜಿಲ್ಲೆ,
ದೂರವಾಣಿ:0820-2560492 (ಕ), ಫ್ಯಾಕ್ಸ್:0820-2560492, ಇಮೈಲ್: thasildarbrahmavara@gmail.com

ಎಲ್ ಎನ್ ಎಸ್ ಆರ್ 238/2016-17 ದಿನಾಂಕ; 10/07/2019

ರಿಗೆ,
ಮಾನ್ಯ ಜಿಲ್ಲಾಧಿಕಾರಿಯವರು
ಉಡುಪಿ ಜಿಲ್ಲೆ, ಉಡುಪಿ

ಮಾನ್ಯರೇ,

ವಿಷಯ; ಬ್ರಹ್ಮಾವರ ತಾಲೂಕು ಬಾಳ್ಕುದ್ರು ಗ್ರಾಮದ ಸರ್ವೆ ನಂಬರ್ 71/3 ರಲ್ಲಿ 0.31 ಎಕ್ರೆ ಜಮೀನಿನ ಸ್ಥಳ ತನಿಖೆ ಮಾಡಿ ವರದಿ ನೀಡುವ ಕುರಿತು

ಉಲ್ಲೇಖ:1)ಮಾನ್ಯ ಜಿಲ್ಲಾಧಿಕಾರಿಯವ ಪತ್ರ ಸಂಖ್ಯೆ ಆರ್ ಎಪಿ. ಎಸ್ ಆರ್ 67/2018 ದಿ;03/07/2019
2)ಕಂದಾಯ ನಿರೀಕ್ಷಕರು ಕೋಟ ಇವರ ವರದಿ ಸಂಖ್ಯೆ ಐಆರ್ 351/2019-20 ದಿ;09/07/2019
3)ಮಾನ್ಯ ಉಪವಿಭಾಗದ ದಂಡಾಧಿಕಾರಿ ಹಾಗೂ ಸಹಾಯಕ ಕಮೀಷನರ್ ಕುಂದಾಪುರ ಇವರ ನಡವಳಿ ಎಂಎಜಿ ಸಿಆರ್ 01/2016-17 ದಿನಾಂಕ 19/01/2017
4)ಈ ಕಛೇರಿ ನಡವಳಿ ಸಂಖ್ಯೆ ಎಎಲ್ಎನ್ ಎಸ್ ಆರ್ 238/2016-17 ದಿನಾಂಕ 01/02/2017
5)ಮಾನ್ಯ ಸಹಾಯಕ ಕಮೀಷನರ್ ಕುಂದಾಪುರ ವಿಭಾಗ ಕುಂದಾಪುರ ಇವರ ನ್ಯಾಯಾಲಯದ ಆದೇಶ ಸಂಖ್ಯೆ ಸಿಡಿನ್;RD0050000183340/ಆರ್.ಫ 228/2018 ದಿನಾಂಕ 24/09/2018
6)ಈ ಕಛೇರಿ ಹಿಂಬರಹ ಸಂಖ್ಯೆ ಎಎಲ್ಎನ್ ಸಿಆರ್ 238/2016-17 ದಿನಾಂಕ 25/08/2016

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಬ್ರಹ್ಮಾವರ ತಾಲೂಕು ಬಾಳ್ಕುದ್ರು ಗ್ರಾಮದ ಸರ್ವೆ ನಂಬರ್ 71/3 ರಲ್ಲಿ 0.31 ಎಕ್ರೆ ಜಮೀನಿಗೆ ಈ ಹಿಂದೆ ಬಿಡಿಸ್ ಎಎಲ್ ಎನ್ ಎಸ್ಆರ್ 329/2013-14 ದಿನಾಂಕ 01.02.2014 ರಂತೆ ಕೈಗಾರಿಕಾ(ಐಸ್ ಪ್ಲಾಂಟ್) ಉದ್ದೇಶದ ಭೂಪರಿವರ್ತನೆ ಆದೇಶವನ್ನು ನೀಡಲಾಗಿದ್ದು, ಸದ್ರಿ ಆದೇಶದಲ್ಲಿ ಭೂಕಂದಾಯ ಕಲಂ 95(2), 95(4), 95(7) ರ ಷರತ್ತುಗಳಿಗೆ ಒಳಪಡಿಸಿ ಭೂಪರಿವರ್ತನೆ ಆದೇಶವನ್ನು ನೀಡಿದ್ದಾಗಿರುತ್ತದೆ.

ಅರ್ಜಿದಾರರು ದಿ.19/08/2016ರಂದು ಕೈಗಾರಿಕಾ(ಐಸ್ ಪ್ಲಾಂಟ್) ಉದ್ದೇಶಕ್ಕೆ ಭೂಪರಿವರ್ತನೆಗೊಂಡ ಜಮೀನಿಗೆ ಸಂಬಂಧಿಸಿದಂತೆ ಫಿಶ್ ಕಟ್ಟಿಂಗ್ ಮತ್ತು ಫಿಶ್ ವೇಸ್ಟ್ ಪೌಢರ್ ಘಟಕದ ಉದ್ದೇಶಕ್ಕಾಗಿ ಭೂಪರಿವರ್ತನೆ ಆದೇಶವನ್ನು ತಿದ್ದುಪಡಿಮಾಡಿಕೊಡಬೇಕೆಂದು ಕೋರಿದ್ದು, ಈ ಬಗ್ಗೆ ಉಲ್ಲೇಖ(6)ರಂತೆ ಸದ್ರಿ ಪ್ರಕರಣವು ಮಾನ್ಯ ಸಿವಿಲ್ ಜಡ್ಜ್ ರ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿರುವುದರಿಂದ, ಮಾನ್ಯ ನ್ಯಾಯಾಲಯ ಹೊರಡಿಸಬಹುದಾದ ಆದೇಶವನ್ನು ಪರಿಶೀಲಿಸಿಕೊಂಡು ಮುಂದಿನ ಕ್ರಮ ಜರುಗಿಸಬಹುದೆಂದು ಹಿಂಬರಹ ನೀಡಿರುವುದು ಕಂಡುಬರುತ್ತದೆ.

ಕೈಗಾರಿಕಾ(ಐಸ್ ಪ್ಲಾಂಟ್) ಉದ್ದೇಶದ ಭೂಪರಿವರ್ತನೆ ಆದೇಶವನ್ನು ಪಡೆದುಕೊಂಡ ಜಮೀನಿನ ಖಾತಾದಾರರು ತಮ್ಮ ಭೂಪರಿವರ್ತಿತ ಜಮೀನಿನಲ್ಲಿ ಉದ್ದೇಶಿತ ಐಸ್ ಪ್ಲಾಂಟ್ ಮಾಡದೆ ಫಿಶ್ ಮಿಲ್ ಘಟಕವನ್ನು ಸ್ಥಾಪಿಸಿ ಯಂತ್ರೋಪಕರಣಗಳನ್ನು ಅಳವಡಿಸಿದ್ದು, ಈ ಪಿಶ್ ಪೌಡರ್ ಘಟಕದಿಂದ ಗ್ರಾಮದ ಸಾರ್ವಜನಿಕರು ಹಾಗೂ ಶಾಲಾ ಮಕ್ಕಳಿಗೆ ತೊಂದರೆ ಆಗುತ್ತಿದ್ದು, ಸದ್ರಿ ಪಿಶ್ ಕಟ್ಟಿಂಗ್ ಘಟಕವನ್ನು ಆಕ್ಷೇಪಿಸಿ ಸಾರ್ವಜನಿಕರು ಈ ಕಛೇರಿಗೆ ದಿನಾಂಕ 18/01/2017 ರಂದು ಮನವಿ ಸಲ್ಲಿಸಿದ್ದು, ಸದ್ರಿ ಪಿಶ್ ಕಟ್ಟಿಂಗ್ ಫೌಡರ್ ಘಟಕವನ್ನು ಸ್ಥಗಿತಗೊಳಿಸುವ ಬಗ್ಗೆ ಐರೋಡಿ ಗ್ರಾಮ ಪಂಚಾಯತ್ ಎದುರು ಅನಿರ್ದಿಷ್ಟಾವದಿ ಮುಷ್ಕರ ಆರಂಬಿಸಿದ್ದು, ಮುಷ್ಕರದ ಸ್ಥಳಕ್ಕೆ ಹಾಜರಾದ

ಆರ್.ಐ.ಫ./ಸಿಆರ್/.3 12/2019
ಮಾಹಿತಿ ಹಕ್ಕು ಪ್ರತಿ

9821

ಅಧೀಕ್ಷಕರು

102

ಉಪವಿಭಾಗದ ದಂಡಾಧಿಕಾರಿ ಹಾಗೂ ಸಹಾಯಕ ಕಮೀಷನರ್ ಕುಂದಾಪುರ ಇವರು ಪಿಶ್ ಪೌಡರ್ ಘಟಕದಿಂ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ಮನಗಂಡು ಉಲ್ಲೇಖ(3)ರ ನಡವಳಿಯಲ್ಲಿ ಅನಧಿಕೃತ ಪಿಶ್ ಪೌಡರ್ ಘಟಕದ ಕೆಲಸವನ್ನು ಸ್ಥಗಿತಗೊಳಿಸುವಂತೆ ಶರ್ತಬದ್ಧ ಆದೇಶ ಹೊರಡಿಸಿರುತ್ತಾರೆ.

ಭೂಪರಿವರ್ತನೆ ಆದೇಶದಲ್ಲಿ ನಮೂದಿಸಿದ ಉದ್ದೇಶ ಹಾಗೂ ಶರ್ತ ಉಲ್ಲಂಘಿಸಿ ಪಿಶ್ ಪ್ಲಾಂಟ್ ಘಟಕದ ಬದಲು ಬೇರೆ ಉದ್ದೇಶಕ್ಕೆ ಭೂಪರಿವರ್ತಿತ ಜಮೀನನ್ನು ಬಳಸುತ್ತಿರುವುದರಿಂದ ಭೂಪರಿವರ್ತನಾ ಆದೇಶದಲ್ಲಿ ನಮೂದಿಸಿರುವ ಕಲಂ 95(4)ರ ಶರ್ತ ಉಲ್ಲಂಘನೆಯಾಗಿರುವುದು ಕಂಡು ಬಂದಿರುವುದರಿಂದ ಸದ್ರಿ ಕೈಗಾರಿಕಾ(ಐಸ್ ಪ್ಲಾಂಟ್) ಉದ್ದೇಶದ ಭೂಪರಿವರ್ತನೆ ಆದೇಶವನ್ನು ಉಲ್ಲೇಖ(4)ರಂತೆ ರದ್ದುಪಡಿಸಲಾಗಿರುತ್ತದೆ.

ಉಲ್ಲೇಖ(4)ರ ಭೂಪರಿವರ್ತನೆ ಆದೇಶದ ರದ್ದತಿಯನ್ನು ಪ್ರಶ್ನಿಸಿ ಉಮಾದೇವಿ ಬಿನ್ ನಾಗವೇಣಿ, ಬಾಳ್ಕುದ್ರು ಗ್ರಾಮ ಇವರು ಸಹಾಯಕ ಕಮೀಷನರ್ ಕುಂದಾಪುರರವರ ನ್ಯಾಯಾಲಯದಲ್ಲಿ ಮೇಲ್ಮನವಿಗೆ ಸಂಬಂಧಿಸಿದಂತೆ ಮಾನ್ಯ ಸಹಾಯಕ ಕಮೀಷನರ್ ಕುಂದಾಪುರ ಇವರು ಉಲ್ಲೇಖ(5)ರ ಆದೇಶದಲ್ಲಿ ಉಲ್ಲೇಖ(4)ರಂತೆ ಭೂಪರಿವರ್ತನೆ ಮಂಜೂರಾತಿಯ ಆದೇಶ ರದ್ದುಪಡಿಸಿದ್ದು ಸಮಂಜಸವಾಗಿರುದಾಗಿ ಆದೇಶಿಸಿರುವುದಾಗಿದೆ.

ಉಲ್ಲೇಖ(5)ರ ಮಾನ್ಯ ಸಹಾಯಕ ಕಮೀಷನರ್ , ಕುಂದಾಪುರ ಇವರ ಆದೇಶ ಕ್ರಮಾಂಕ ಸಿಡಿಸ್ ಆರ್ ಡಿ0050000183340/ಆರ್‌ಎ 228/2018 ದಿನಾಂಕ 24/09/2018ರ ಆದೇಶದ ವಿರುದ್ಧ ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುವುದರಿಂದ, ಈ ಬಗ್ಗೆ ಖುದ್ದು ಸ್ಥಳ ಪರಿಶೀಲನೆ ಮಾಡಿ ತನಿಖಾ ವರದಿಯನ್ನು ಸಲ್ಲಿಸುವಂತೆ ಉಲ್ಲೇಖ(1)ರ ಪತ್ರದಲ್ಲಿ ಸೂಚಿಸಲಾಗಿರುತ್ತದೆ.

ಅದರಂತೆ, ಬ್ರಹ್ಮಾವರ ತಾಲೂಕು ಬಾಳ್ಕುದ್ರು ಗ್ರಾಮದ ಸರ್ವೆ ನಂಬರ್ 71/3 ರಲ್ಲಿ 0.31 ಎಕ್ರೆ ಜಮೀನಿಗೆ ಸಂಬಂಧಿಸಿದಂತೆ ದಿನಾಂಕ 09/07/2019 ರಂದು ಸ್ಥಳ ಪರಿಶೀಲನೆ ನಡೆಸಲಾಗಿ ಸದ್ರಿ ಸ್ಥಳದಲ್ಲಿ ಪಿಶ್ ಪೌಡರ್ ಘಟಕ ನಿರ್ಮಾಣವಾಗಿದ್ದು, ಘಟಕದಲ್ಲಿ ಯಂತ್ರೋಪಕರಣಗಳನ್ನು ಅಳವಡಿಸಲಾಗಿರುತ್ತದೆ. ತನಿಖೆ ಸಂಧರ್ಭದಲ್ಲಿ ಸದ್ರಿ ಘಟಕದಲ್ಲಿ ಯಾವುದೇ ಕಾರ್ಯ ಚಟುವಟಿಕೆ ನಡೆಯುತ್ತಿರುವುದು ಕಂಡುಬಂದಿರುವುದಿಲ್ಲ. ಈ ಬಗ್ಗೆ ಸ್ಥಳ ತನಿಖಾ ಸಂಧರ್ಭದಲ್ಲಿ ತೆಗೆದ ಛಾಯಾ ಚಿತ್ರದ ಪ್ರತಿಯನ್ನು ಲಗ್ತೀಕರಿಸಿದ್ದು ಸಂಪೂರ್ಣ ಕಡತವನ್ನು ತಮ್ಮ ಮುಂದಿನ ಕ್ರಮದ ಕುರಿತು ಸಲ್ಲಿಸಿದೆ.

ತಮ್ಮ ನಂಬುಗೆಯ

ತಹಶೀಲ್ದಾರರು ಬ್ರಹ್ಮಾವರ
ಬ್ರಹ್ಮಾವರ ತಾಲ್ಲೂಕು ಉಡುಪಿ ಜಿಲ್ಲೆ

ಆರ್.ಐ.ಎ./ಆರ್ 1?2 /2019
ಮಾಹಿತಿ ಹಕ್ಕು ಪ್ರತಿ

ಅಧೀಕ್ಷಕರು
ಜಿಲ್ಲಾಧಿಕಾರಿಯವರ ಕಛೇರಿ
ಉಡುಪಿ ಜಿಲ್ಲೆ, ಉಡುಪಿ

ANNEX-AA [ENGLISH TRANSLATION] 103

Government of Karnataka
Office of the Tahsildar, Brahamavara-576213, Brahamavara Taluk and Udupi District

Phone: 0820-2560492(Ka), Fax: 0820-2560492. Email: thasildarbrahmavara@gmail.com

AAL N S R 238/2016-17 Dated:10-07-2019

To,
Respected District Collector,
Udupi District, Udupi

Respected Sir,
Sub: Regarding the spot inspection to be conducted at 0.31 acres of Sy. No. 71/3, Brahamavara Taluk, Balkudru Grama and the report of the same.
Ref: 1. Letter from the District Collector, No. RAP S R 67/2018 dated: 03-07-2019
2. Report submitted by the Revenue examiners, No.IR 351/2019-20 dated 09-07-2019
3. Proceedings before the Sub-divisional magistrate as well as the Assistant Commissioner, Kundapura, MAG CR 01/2016-17 dated 19-01-2017
4. Proceedings before this office, No. AAL N S R 238/2016-17 dated 01-02-2017
5. Order passed by the court of the Assistant Commissioner, Kundapura Sub-division, Kundapura, No. CDS; RD0050000183340/RA/228/2018 dated 24-09-2018.
6. Endorsement from this office, No.AAL N CR 238/2016-17 dated 25-08-2016

*********

With respect to the above matter, previously a conversion order for 0.31 acres of Sy. No. 71/3, Brahamavara Taluk, Balkudru Grama was granted vide BDS AAL N SR 329/2013-14 dated 01-02-2014 for the purpose of establishment of an ice plant. This order was granted after having included the conditions as specified in the Revenue rules, Sec. 95(2), 95(7).

It was on 19-08-2016 that the applicants requested that the conversion order for the purpose of ice plant be removed and replaced with fish cutting and fish powder unit. With respect to the same as per Ref (6), as the case is pending before the Hon'ble Civil Judge, an endorsement was issued instructed that after verifying the order of the civil judge further activities can be undertaken.

However, inspite of the conversion order being issued for the purpose of establishment of an ice plant, the Khatha holders have violated the said order and have instead used the land for the purposes of establishing a fish mill unit and have installed the machinery for the same. This fish powder unit has been causing much difficulty to the residents as well as the students of the school located in the vicinity. Due to this the villagers had filed a complaint before this office. They also staged a strike opposing and asking for the shutting down of the said units on 18-01-2017 before the Irody Grama Panchayath. Therefore, the Sub- divisional magistrate as well as the Assistant Commissioner being present at the place observed that the fish powder unit is harmful to the public and were pleased to order that all activities in the illegally functioning fish powder unit be stopped as per Ref(3).

104

Since the entries and the conditions of the conversion order have been violated and the land has been used for purposes other than the conversion purpose of establishment of an ice plant thereby violating the conversion entries Sec. 95(4), the said conversion order granted for the purpose of an ice plant stands cancelled as per Ref (4).

The cancellation of the conversion order as per Ref (4) was challenged by Uma Devi D/o Nagaveni, Balkudru Grama before the Court of the Assistant Commissioner, Kundapura. With respect to the appeal, as per Ref(5) the Assistant Commissioner, Kundapura observed that the cancellation of the conversion order as per Ref(5) was reasonable.

An appeal was later filed before the office of the court of the District Collector challenging the order of the Assistant Commissioner, No. CDS RD0050000183340/RA/228/2018 dated 24-09-2018 as per ref (5). With regards to the same, it was hereby asked, Ref (1) that a spot inspection of the same be held and report be submitted.

Therefore, a spot inspection was conducted on 09-07-2019 at 0.31 acres of Sy. No.71/3, Brahmavara Taluk, Balkudru Grama. It was found that a fish powder unit had been established at the place and the required machinery has been installed. However, no activities were taking place at the said unit. The photographs of the spot inspection along with the entire file is being submitted before you for suitable action to be taken.

Yours' faithfully,
Tahsildar, Brahamavara
Udupi District

105

ANNEX- AB

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಯವರ ಕಾರ್ಯಾಲಯ, ರಜತಾದ್ರಿ, ಮಣಿಪಾಲ – 576 104, ಉಡುಪಿ ಜಿಲ್ಲೆ,

ದೂರವಾಣಿ:0820-2574925(ಕ), 2532700(ಮ), 0820-2574926 (ಫ್ಯಾಕ್ಸ್),

ಇಮೈಲ್: deo.udupi@gmail.com ವೆಬ್‌ಸೈಟ್ www.udupi.nic.in

ಸಂಖ್ಯೆ: ಆರ್.ಎ.ಪಿ. ಎಸ್‌ಆರ್. 67/2018 ದಿನಾಂಕ: 23/07/2019

ಪ್ರಾದೇಶಿಕ ನಿರ್ದೇಶಕರು

ಸರಸರ

'ಸಿ' ವಿಂಗ್, ಒಂದನೇ ಮಹಡಿ,

ಜಿಲ್ಲಾಧಿಕಾರಿಯವರ ಕಛೇರಿ,

ರಜತಾದ್ರಿ, ಮಣಿಪಾಲ, ಉಡುಪಿ.

- ಇವರಿಗೆ.

ಮಾನ್ಯರೇ,

ವಿಷಯ:- ಬ್ರಹ್ಮಾವರ ತಾಲೂಕು ಬಾಳ್ಕುದ್ರು ಗ್ರಾಮದ ಸ.ನಂ. 71/3 ರಲ್ಲಿ 0.31 ಎಕ್ರೆ ಜಮೀನಿನ ಬಗ್ಗೆ ವರದಿ ನೀಡುವ ಕುರಿತು.

ಉಲ್ಲೇಖ: ತಹಶೀಲ್ದಾರರು ಬ್ರಹ್ಮಾವರ ಇವರ ಪತ್ರ ಸಂಖ್ಯೆ: [illegible] ದಿನಾಂಕ: 10/07/2019

-******-

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ. ಉಮಾ ದೇವಿ, ಬಿನ್: ನಾಗದೇವ, ಬಾಳ್ಕುದ್ರು ಗ್ರಾಮ, ಬ್ರಹ್ಮಾವರ ತಾಲೂಕು ಇವರು ಸಹಾಯಕ ಕಮೀಷನರು, ಕುಂದಾಪುರ ಇವರ ಆದೇಶ ಕ್ರಮಾಂಕ: ಸಿದಿಸ್ ಆರ್‌ಡಿ 0050000183340/ಆರ್‌ಎ 228/2018 ದಿನಾಂಕ: 24/09/2018 ರ ಆದೇಶದ ವಿರುದ್ಧ ಈ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ.

